ಉಪನ್ಯಾಸ ಗ್ರಂಥಮಾಲೆ

೩೭೧

ಸಾಹಿತ್ಯ ಕ್ಷೇತ್ರಕ್ಕೆ ಉತ್ತರ ಕನ್ನಡ ಜಿಲ್ಲೆಯ ಕೊಡುಗೆ

ಆರ್. ಎಂ. ಶೇಟ

ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ

ಆಗಸ್ಟ, ೧೯೮೩

ಉಪನ್ಯಾಸ ಗ್ರಂಥಮಾಲೆ
೩೭೧

ಸಾಹಿತ್ಯ ಕ್ಷೇತ್ರಕ್ಕೆ ಉತ್ತರ ಕನ್ನಡ ಜಿಲ್ಲೆಯ ಕೊಡುಗೆ

ಶ್ರೀ ಆರ್. ಎಂ. ಶೇಟ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಅಗಸ್ಟ, ೧೯೮೬

ಪ್ರಕಾಶಕರು :

ಎಸ್. ಬಿ. ನಾಯಕ

ನಿರ್ದೇಶಕರು, ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು

ಅಗಸ್ಟ, ೧೯೬೭

ಬೆಲೆ : ೫೧ ಪೈಸೆ

ಮುದ್ರಕರು :

ರಾಜಶ್ರೀ ಪ್ರಿಂಟಿಂಗ ಪ್ರೆಸ್
ತಡಕೋಡ ಗಲ್ಲಿ
ಧಾರವಾಡ

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನ ಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ

ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವ ದಲ್ಲದೆ ಎಂತಹ ವಿಷಯುವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೩೭೦ ಪುಸ್ತಿಕೆಗಳು ಪ್ರಕಟ ವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿ ರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಿಕೆಗಳು ನಾಲ್ಕು–ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋ ಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಎಸ್. ಜಿ. ದೇಸಾಯಿ
ಕುಲಪತಿ

ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ಕಾರ್ಯಕ್ರಮದ ಅಂಗವಾಗಿ ನಾನು ದಿನಾಂಕ ೨೯–೧–೧೯೮೩ರಂದು ಕಾರವಾರ ಜಿಲ್ಲೆಯ 'ಹಿರೇಗುತ್ತಿ'ಯಲ್ಲಿ "ಸಾಹಿತ್ಯ ಕ್ಷೇತ್ರಕ್ಕೆ ಉತ್ತರ ಕನ್ನಡ ಜಿಲ್ಲೆಯ ಕೊಡುಗೆ" ಎಂಬ ವಿಷಯದ ಮೇಲೆ ಮಾಡಿದ ಭಾಷಣವೇ ತುಸು ಹೊಂದಾಣಿಕೆಯೊಂದಿಗೆ ವಿಸ್ತಾರಗೊಂಡು ಈಗ ಪುಸ್ತಿಕೆಯ ರೂಪದಲ್ಲಿ ಪ್ರಕಟಗೊಳ್ಳುತ್ತಿದೆ.

ಉತ್ತರ ಕನ್ನಡ ಜಿಲ್ಲೆಯ ಸಾಹಿತ್ಯ ಗಾತ್ರದಲ್ಲಿಯೂ ದೊಡ್ಡದು. ವೈವಿಧ್ಯಪೂರ್ಣವಾದದ್ದೂ ಆಗಿದೆ. ಪ್ರತಿಯೊಂದು ಗ್ರಂಥವೂ ತನ್ನದೇ ಆದ ಸತ್ವ ಹಾಗೂ ವೈಶಿಷ್ಟ್ಯದಿಂದ ಕೂಡಿದ್ದಾಗಿದೆ. ಸಾಹಿತ್ಯ ಕ್ಷೇತ್ರದಲ್ಲಿಯೇ ಮೇರು ಕೃತಿಗಳಾಗಿ ಕಂಗೊಳಿಸುವ ಕೆಲವು ಕೃತಿಗಳನ್ನು ಉತ್ತರ ಕನ್ನಡ ಜಿಲ್ಲೆ ನೀಡಿದೆ. ಈ ವಿಷಯದ ಕುರಿತು ಅಂದು ಹಿರೇಗುತ್ತಿಯಲ್ಲಿ ನನಗೆ ಭಾಷಣ ಮಾಡಲು ಅವಕಾಶವಿತ್ತು, ಅದನ್ನು ಇಂದು ಪುಸ್ತಕ ರೂಪದಲ್ಲಿ ಬೆಳಕಿಗೆ ತಂದ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರಿಗೆ, ಮತ್ತು ಅಧಿಕಾರ ವರ್ಗದವರಿಗೆ ನಾನು ಚಿರಋಣಿಯಾಗಿದ್ದೇನೆ. ಈ ಲೇಖನ ಬರೆಯಲು ಮಾರ್ಗದರ್ಶನ ಮಾಡಿ ಸಹಕಾರ ನೀಡಿದ ನನ್ನ ಪ್ರಾಧ್ಯಾಪಕರಾದ

ಎಲ್. ವಿ. ಪೈ ಯವರಿಗೆ ಅನಂತ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಕೊನೆಯದಾಗಿ ಅಂದು ಉಪನ್ಯಾಸವನ್ನು ಕೇಳಿ ನನಗೆ ಪ್ರೋತ್ಸಾಹ ಉತ್ತೇಜನಗಳನ್ನಿತ್ತ ಅಧ್ಯಾಪಕರನ್ನೂ, ಹಿರೇಗುತ್ತಿಯ ಮಹಾಜನರನ್ನೂ ಕೃತಜ್ಞತೆಯಿಂದ ನೆನೆಯುತ್ತೇನೆ.

ಡಾ. ವಿ. ವಿ. ಬಾಳಿಗಾ
ವಾಣಿಜ್ಯ ಮಹಾವಿದ್ಯಾಲಯ
ಕುಮಟಾ

ಆರ್. ಎಂ. ಶೇಟ

ಪರಿವಿಡಿ

ಪೀಠಿಕೆ

ಇಂದ್ರನ ನಂದನವನವನ್ನು ದೇವಲೋಕದಿಂದಿಳಿಸಿ ಭೂಮಿಯಲ್ಲಿ ಸ್ಥಾಪಿಸಿರುವಂತೆ ಸ್ವರ್ಗ ಲೋಕವನ್ನೇ ಹಂಗಿಸುವಂತೆ ಉತ್ತರ ಕನ್ನಡ ಜಿಲ್ಲೆ ಕಂಗೊಳಿಸುತ್ತದೆ. ಉತ್ತರ ಕನ್ನಡ ಜಿಲ್ಲೆಯೆಂದರೆ ಕರ್ನಾಟಕದ ಕಾಶ್ಮೀರ. ಒಂದೆಡೆ ಕಡಲು ಇನ್ನೊಂದೆಡೆಗೆ ಸಂಹ್ಯಾದ್ರಿಯ ಮಡಿಲು, ಒಂದೆಡೆ ಬಯಲು, ಇನ್ನೊಂದೆಡೆಗೆ ನದಿಗಳ ಹೊನಲು, ಒಂದೆಡೆ ಗಿರಿ-ಶಿಖರ, ಮತ್ತೊಂದೆಡೆಗೆ ಝರಿ-ನೀರು, ಮನ ಸೆಳೆವ ಆಕಾಶ ರಸಿಕರಿಗೆ ಕಾವ್ಯ ಬರೆಯಲು ಸದಾವಕಾಶ. ಇವುಗಳ ಸಮ್ಮಿಲನದಿಂದ ಪ್ರಕೃತಿದೇವಿ ತನ್ನ ಸೊಬಗಿನ ಭಂಡಾರವನ್ನೇ ಸುರಿದು ನರ್ತಿಸುತ್ತಿದ್ದಾಳೆ. ಕವಿ ಹೃದಯಕ್ಕೆ ಸ್ಪಂದನ ನೀಡಬಲ್ಲ ಜಿಲ್ಲೆ, ರಸಿಕರಿಗೆ ರಸದೂಟ ನೀಡಿದೆ. ಕವಿಗಳ ಮನಸ್ಸನ್ನು ಸೂರೆ ಮಾಡಿದೆ. ಕವಿಗಳೆಲ್ಲ ಎದೆತುಂಬಿ, ಮನತುಂಬಿ, ತನುತುಂಬಿ, ಕಂಠತುಂಬಿ ಹಾಡಿದ್ದಾರೆ ಸ್ವರ್ಗವೆಂಬುದಿದ್ದರೆ ಅದು ಇಲ್ಲಿಯೇ ಎಂದು ಹಾಡಿದ ಕವಿವಾಣಿ ನೆನಪಿಗೆ ಬರುತ್ತದೆ. ದಿನಕರ ದೇಸಾಯಿಯವರು ಈ ಜಿಲ್ಲೆಯನ್ನು ಬಣ್ಣಿಸುತ್ತಾ "ಕನ್ನಡ ನಾಡಿನ ಕಡಲಿನ ಸೀಮೆ ಬಣ್ಣಿಸಿದಷ್ಟು ಇನ್ನೂ ಕಡಿಮೆ" ಹುಟ್ಟುವದಾದರೆ ಇನ್ನೂ ಇನ್ನೂ ಉತ್ತರ ಕನ್ನಡದಲ್ಲೇ ಅನ್ನು." "ಸಿರಿಗನ್ನಡದ ಚಪ್ಪರವೆ ನನ್ನ ಜಿಲ್ಲೆ ಇಲ್ಲಿಯೇ ಇನ್ನೊಮ್ಮೆ ಹುಟ್ಟುವೆನು ನಲ್ಲೆ" ಎಂದು ಹೇಳಿದರೆ ಪಂಪನು ವಿಕ್ರಮಾರ್ಜುನ ವಿಜಯದಲ್ಲಿ,

"ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿ
ನಿಂಪುಗ ।
ಳ್ಗಾಗರವಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ॥
ನಾಗಿಯುಮೇನೊ ತೀರ್ದಪು (ದೆ) ತೀರದೊಡಂ
ಮರಿದುಂಬಿಯಾಗಿ ಮೇಣ್।
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ವನವಾಸಿ
ದೇಶದೊಳ್॥

"ತೆಂಕಣ ಗಾಳಿ—…………….ನೆನೆವುದೆನ್ನ ಮನಂಬ ನವಾಸಿ ದೇಶಮಂ." ಅನೇಕ ಕವಿಗಳಿಗೆ ಈ ಜಿಲ್ಲೆಯು ಪ್ರಕೃತಿ ಸ್ಫೂರ್ತಿ ನೀಡಿರುವದರಿಂದ ಈ ಜಿಲ್ಲೆಯನ್ನು ಅಥವಾ ಈ ಜಿಲ್ಲೆಯಲ್ಲಿರುವ ಬನವಾಸಿಯನ್ನು ಮನಸಾರೆ ಬಣ್ಣಿಸಿದ್ದಾರೆ. ಚಾಮರಸನು ಪ್ರಭುಲಿಂಗಲೀಲೆಯಲ್ಲಿ ಬನವಾಸಿಯನ್ನು ಈ ರೀತಿಯಾಗಿ ವರ್ಣಿಸಿದ್ದಾನೆ.

"ಅವನಿಯೊಳವನೀಕಾಂತೆಗೊಪ್ಪುವ
ವದನವೋ ಶೃಂಗಾರ ಸಾರದ
ಸದನವೋ ಸೊಬಗಿನ ಸುಮಾನದ ಸುಖದ ನೆಲೆವೀಡೋ
ಸುದತಿ ರತ್ನಗಳೊಗೆವ ಚಲುವಂ
ಬುಧಿಯೊ ಪೇಳೇನೆ ಸಕಲ ಸೌರಂ
ಭವಲಿ ಸೊಗಹಿಸುದಲ್ಲಿ ಬನವಸೆಯೆಂಬ ಪಟ್ಟಣವು"

ಕನ್ನಡ ನಾಡಿನ ಪ್ರಾಚೀನ ಶಿಲಾಶಾಸನಗಳಲ್ಲಿ ಅನೇಕ ಕಡೆ ಬನವಾಸಿಯ ವರ್ಣನೆ ದೊರೆಯುತ್ತದೆ.

ಕಾರವಾರ ಜಿಲ್ಲೆಯ ಗದ್ದೆ – ಬಯಲು, ಶಶಿ–ಸೂರ್ಯ, ಗಿರಿ-ವನ, ತರು–ಲತೆ, ನೆಲ–ಮುಗಿಲು. ಮಿಗ–ಹಕ್ಕಿ, ಹೂ –ಹಸಿರು. ಚಳಿ–ಮಳೆ. ಸಂಜೆ-ಮುಂಜಾವು, ಗುಡುಗು-ಸಿಡಿಲು, ಕಡಲು-ಕೊಳಗಳು, ನದಿ-ತೋಟಗಳು, ನೀರು–ಗಾಳಿಗಳು, ಬೆಟ್ಟ–ಗಟ್ಟಗಳು ಸಾಹಿತ್ಯ ಕ್ಷೇತ್ರಕ್ಕೆ ಬಹುದೊಡ್ಡ ಕೊಡುಗೆ ಯನ್ನು ನೀಡಿವೆ.

ಸಾಹಿತ್ಯ ಇಂದು ನಿನ್ನೆಯದಲ್ಲ. ಅದು ಬೆಳೆದು ಬಂದು ವಿವಿಧ ಮುಖವಾಗಿ ತುಂಬಿ ಹರಿದಿದೆ. ಸಾಹಿತ್ಯ ಕ್ಷೇತ್ರದಲ್ಲಿ ಉತ್ತರ ಕನ್ನಡ ಜಿಲ್ಲೆಯ ಸ್ಥಾನ ಬಹು ಎತ್ತರಕ್ಕೆ ಬರಲಾರದೆಂಬ ಭಾವನೆಯೊಂದಿತ್ತು. ಆದರೆ ಈ ಜಿಲ್ಲೆಯ ಸಂಪೂರ್ಣ ಸಾಹಿತ್ಯ-ಲೋಕವನ್ನು ಅವಲೋಕಿಸಿ ನೋಡಿದಾಗ ವೈವಿಧ್ಯಮಯವಾದ ಮಹತ್ವಪೂರ್ಣವಾದ ಸಾಹಿತ್ಯವನ್ನು ಈ ಜಿಲ್ಲೆ ಸಾಹಿತ್ಯ ಕ್ಷೇತ್ರಕ್ಕೆ ನೀಡಿದೆ. ಈ ಜಿಲ್ಲೆಯ ಸಾಹಿತ್ಯವನ್ನು ಈ ರೀತಿಯಾಗಿ ವಿಭಾಗಿಸಬಹುದು.

೧. ಹಿಂದಿನ ಸಾಹಿತ್ಯ
೨. ಇತ್ತೀಚಿನ ಸಾಹಿತ್ಯ
೩. ದೇಸೀ ಸಾಹಿತ್ಯ

ಹಿಂದಿನ ಸಾಹಿತ್ಯ

ರತ್ನತ್ರಯರಲ್ಲಿ ಹಿರಿಯ ಕವಿಯಾದ ಪಂಪನು ಹುಟ್ಟಿದ್ದು ಬೆಳೆದದ್ದು ಎಲ್ಲಿ ಎಂಬುದು ಸ್ಪಷ್ಟವಾಗಿಲ್ಲವಾದರೂ ಅವನ ತಾಯ್ನಾಡು, ಹುಟ್ಟೂರು ಬನವಾಸಿಯೇ ಆಗಿರಬೇಕೆನಿಸುತ್ತದೆ.

ತಾಯನ್ನಾಡಿನ ಒಲುಮೆಯನ್ನು ಉಕ್ಕಿ ಹರಿಸುತ್ತಾ "ಬನವಾಸಿ ದೇಶ ನಂದನ ವನದಂತೆ". ಅಲ್ಲಿ ಮನುಷ್ಯರಾಗಿ ಹುಟ್ಟುವುದಕ್ಕೆ ಪುಣ್ಯಬೇಕು. ಮರಿದುಂಬಿಯಾಗಿಯಾದರೂ ಇಲ್ಲವೇ ಕೋಗಿಲೆ ಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್, ಎಂದೋ ಒಮ್ಮೆ ಬಂದು ಹೋದ ಆಗಂತುಕನು ಇಷ್ಟು ಆಳ ವಾದ ಪ್ರೀತಿಯನ್ನು ಹೊರ ಸೂಸಲಾರ. "ತೆಂಕನಾಡ ಮಜಿ ಯಲ್ಲಿನ್ನೇಂ ಮನಂ ಬರ್ಕುಮೋ" ಎಂಬ ಮಾತುಗಳು, ತನ್ನ ಸರ್ವ ಸುಖಕ್ಕೂ ನೆಲೆವೀಡಾದ ಮೆಚ್ಚಿನ ತಾಯ್ನಾಡನ್ನು ಅಗಲಿ ದೂರ ಹೋಗಿ ಇರಬೇಕಾಗಿ ಬಂದಪನೊಬ್ಬನು ಅದನ್ನು ಅಡಿ ಗಡಿಗೆ ಹಂಬಲಿಸಿರುವ ನುಡಿಗಳಂತಿವೆ. ಆದರೆ ಸಂದೇಹಕ್ಕೆ ಎಡೆ ಯಿಲ್ಲದಂತೆ ಸಾಧಿಸಲಾಗುವುದಿಲ್ಲವಾದರೂ ಅವನು ಇಲ್ಲಿ ಬಹು ಕಾಲ ಬಾಳಿ ಈ ನಾಡಿನ ಮತ್ತು ಅಲ್ಲಿನ ಜನರ ಚೆಲುವಿಗೂ ರಸಿಕತೆಗೂ ಮೆಚ್ಚಿ ನಲಿದು ತನ್ನ ಜೀವನವನ್ನು ತಿದ್ದಿಕೊಂಡು ಮಹಾಕವಿಯಾದನೆಂಬುದರಲ್ಲಿ ಸಂಶಯವಿಲ್ಲ. ಇದಕ್ಕೆ ಕೆಲವು ಉದಾಹರಣೆಗಳನ್ನು ಕೊಡಬಹುದು. ಪಂಪ ತನ್ನ ಕಾವ್ಯ ಗಳಲ್ಲಿ ಬಳಸಿದ್ದು ಪುಲಿಗೆರೆಯ ತಿರುಳ್ಗನ್ನಡ. ವೆಂಗಿಮಂಡಲದಲ್ಲಿ ನೆಲೆಸಿದ್ದರೆ ಪುಲಿಗೆರೆಯ ಕನ್ನಡ ಸಹಜವಾಗುತ್ತಿರಲಿಲ್ಲ. ಇವನ ಶೈಲಿಯಲ್ಲಿ ಉತ್ತರ ಕನ್ನಡದ ದೇಸಿ ಪ್ರಯೋಗಗಳು ಕಂಡು ಬರುತ್ತವೆ. "ಮೇಣ್ಕುಲಟಿಲ್ಲೆಯೋ ನಮಗೆ ದಾಯಿಗರಲ್ಲರೊ ಶಸ್ತ್ರ ವಿದ್ಯೆಯೊಳ್ ಪೂಣ್ಕೆಗಳಿಲ್ಲೆಯೋ.........ಎಂಬ ಪದ್ಯ ದಲ್ಲಿನ "ಇಲ್ಲೆಯೋ" ಎಂಬ ಮಾತು ಹವ್ಯಕರ ಆಡು ಭಾಷೆ ಯಲ್ಲಿ ಈಗಲೂ ಬಳಕೆಯಲ್ಲಿದೆ. ಪಂಪನು ಪಂಪ ಭಾರತದಲ್ಲಿ [೫–೬೨] 'ಗುಂಡಿತ್ತು' ಎಂದು ಪ್ರಯೋಗಿಸಿದ್ದಾನೆ. ನೀರು

ಆಳವಾಗಿದೆ ಎನ್ನಲು ಉತ್ತರ ಕನ್ನಡ ಜಿಲ್ಲೆಯಲ್ಲಿ ಗುಂಡಿ ಇದೆ ಎಂದು ಹೇಳುತ್ತಾರೆ. ಆದಿ ಪುರಾಣದಲ್ಲಿ "ಪೊಂಬಾಳೆಯು ತಣ್ಣಲೆವ ಪ್ರಸಗಂಪನ್ನು ವರ್ಣಿಸುವ ಪದ್ಯವಿದೆ. ಹಳದಿ ಬಣ್ಣದ ಬಾಳೆಗಳು ಬಿರಿವುದರಿಂದಲೇ ಅಡಿಕೆಯ ಸಿಂಗಾರದ ಹೂಗಳ ಕಂಪು ಗಾಳಿಯಲ್ಲಿ ಅಲೆಯಲು ಸಾಧ್ಯವಾಗುತ್ತದೆ.

"ಕರ್ನಾಟಕ ಛಂದೋಬುಧಿ"ಯಿಂದ ನಾಗವರ್ಮನ ದೇಶ ವೇಂಗಿಮಂಡಲವೆಂದು ತಿಳಿದರೂ ಕಾದಂಬರಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದ ವಿದ್ವಾಂಸರು ನಾಗವರ್ಮನು ಬನವಾಸಿಯವನೆಂದು ತೀರ್ಮಾನಕ್ಕೆ ಬಂದಿದ್ದಾರೆ. ಇದಕ್ಕೆ ಅವರು ಕೊಡುವ ಕಾರಣ ಕಾದಂಬರಿಯಲ್ಲಿ ಬರುವ ಚಂದ್ರನನ್ನು ವರ್ಣಿಸುವ ಪದ್ಯ 'ಅರುಣ ಮಣಿದ್ಯೋತಿ ಸಂಧ್ಯಾನಿಬದ್ಧ ಪ್ರೇಮಂ,' 'ಅಮರನದೀ ಶಿಕರೋದಾರ ತಾರಾರಾಮಂ' 'ಗಿರಿಶ ಚಂಚಜ್ಜಟಾ ಜಾಲ ಜೂಟ ಪ್ರೋದ್ಭಾಸಿ ಚಂದ್ರಂ' ಎಂಬ ವಿಶೇಷಣಗಳು ಪಶ್ಚಿಮ ಸಮುದ್ರದಲ್ಲಿ ಮುಳುಗುವ ಸಂಧ್ಯಾಕಾಲದ ಸೂರ್ಯನ ಸೊಬಗನ್ನೂ ಉತ್ತರಕನ್ನಡ ಜಿಲ್ಲೆಯ 'ಗಂಗಾವಲೀ' ನದಿಯನ್ನೂ ಪಶ್ಚಿಮ ಘಟ್ಟಗಳಲ್ಲಿ ಬೆಳೆಯುವ ಉನ್ನತಾಗ್ರ ವೃಕ್ಷಗಳ ಮೇಲೆ ಮೂಡಿ ಬರುವ ಚಂದ್ರನನ್ನೂ ಧ್ವನಿ ಪೂರ್ಣವಾಗಿ ಸೂಚಿಸುತ್ತವೆ. ವಿಂಧ್ಯಾಟವಿ ವರ್ಣಿಸುವ ನೆಪದಲ್ಲಿ ಕವಿ ವರ್ಣಿಸಿರುವ ಬಿದಿರು, ತೆಂಗು, ಅಡಿಕೆ, ವೀಳೆಯದೆಲೆ, ಮೆಣಸಿನ ಬಳ್ಳಿ, ಏಲಕ್ಕಿ, ದರ್ಭೆ, ಶ್ರೀಚಂದನ ಇವು ಪಶ್ಚಿಮ ಘಟ್ಟದಲ್ಲಿ ಅಲ್ಲದೆ ಬೇರೆಲ್ಲಿ ದೊರೆತಾವು ? ಕಾದಂಬರಿಯ ಪೀಠಿಕಾ ಪದ್ಯದಲ್ಲಿ "ಗಿರಿಶ ಚಂಚಜ್ಜಟಾ ಜಾಲ ಜೂಟ ಪ್ರೋದ್ಭಾಸಿ ಚಂದ್ರಂ"ಎಂದು ಹೇಳಿರುವದರಿಂದ ದಿ. ಗೋವಿಂದ

ಪೈ ಅವರು ಗೋಕರ್ಣದ ಮಹಾಬಲೇಶ್ವರನನ್ನು ಹಾಗೂ ಅಮರ ನದೀ ಎಂಬಲ್ಲಿ ಗಂಗಾವಳೀ ಹಾಗೂ ಗಂಗಾನದಿಗಳೆರಡನ್ನೂ ಕವಿಯು ಸೂಚಿಸಿದ್ದಾನೆಂದು ಊಹಿಸಿದ್ದಾರೆ. ಈ ಅಂಶಗಳನ್ನೆಲ್ಲ ಗಮನಿಸಿದಾಗ ನಾಗವರ್ಮನು ಬನವಾಸಿ ಪ್ರಾಂತಕ್ಕೆ ಬಂದು ಕಾದಂಬರಿ ಬರೆದಿರಬಹುದೆಂದು ಊಹಿಸಬಹುದಾಗಿದೆ.

ಕನ್ನಡದ ಅತ್ಯಂತ ವೈಶಿಷ್ಟ್ಯಪೂರ್ಣವಾದ "ಕಬ್ಬಿಗರ ಕಾವ"ವನ್ನು ಬರೆದ ಆಂಡಯ್ಯನು ತನ್ನ ಊರನ್ನು ಸ್ಪಷ್ಟವಾಗಿ ಹೇಳದಿದ್ದರೂ ಆತನು ಹೇಳಿದ ಕನ್ನಡವೆನಿಪ್ಪಾನಾಡು ಉತ್ತರ ಕನ್ನಡವೆಂದು ಮುಳಿಯ ತಿಮ್ಮಪ್ಪಯ್ಯನವರು ತಮ್ಮ ಲೇಖನದಲ್ಲಿ "ಕನ್ನಡವೆನಿಪ್ಪಾ ನಾಡು" ಬನವಾಸಿ ಪ್ರಾಂತ "ಕಾಡು-ನಾಡು" ಕಾಡು = ವನ ನಾಡು=ವಾಸಿ ವನವಾಸಿ=ಬನವಾಸಿ ಕನ್ನಡವು ಸಂಸ್ಕೃತ ಭಾಷೆಯ ಭಾರದಿಂದ ಬಳಲುತ್ತಿರುವಾಗ 'ಅಚ್ಚಗನ್ನಡಂ ಬಿಗಿಪೊಂದಿದ ಕಬ್ಬಿಗರ ಕಾವವನ್ನು ಬರೆದನು. ಈ ಕೃತಿ ಸೂಕ್ಷ್ಮವಾಗಿ ಅವಲೋಕಿಸಿ ನೋಡಿದಾಗ ಕಾಮದೇವ ಎಂಬ ಕದಂಬ ದೊರೆಯನ್ನು ಪುರಾಣ ಕಥೆಯ ಕಾಮದೇವನೊಡನೆ ಕೂಡಿಸಿ ಸಮಕಾಲೀನ ಚರಿತ್ರೆಯ ಘಟನೆಗಳನ್ನು ಸೂಚಿಸಿರುವುದು ತಿಳಿಯುತ್ತದೆ. ಈ ಅವಧಿಯಲ್ಲಿ ಬನವಾಸಿ ಆಳಿದ ಕದಂಬ ದೊರೆ ಕಾಮ ದೇವ. ಇದರಿಂದ ಈ ಕವಿಯ ತಾಯ್ನಾಡು 'ಬನವಾಸಿ' ಎಂದು ಹೇಳಬಹುದು. "ನ ಭೂತೋ ನ ಭವಿಷ್ಯತಿ" ಎಂಬಂತೆ ಈ ಕವಿಯ ಹಿಂದೆ ಯಾರೂ ಇಂತಹ ಸಾಹಸ ಮಾಡಿದ್ದಿಲ್ಲ ಮುಂದೆಯೂ ಮಾಡಲಿಲ್ಲವೆಂಬುದನ್ನು ಲಕ್ಷದಲ್ಲಿಟ್ಟಾಗ ಕವಿ "ಆಂಡಯ್ಯ" ಹಾಗೂ ಅವನ ಕಾವ್ಯ "ಕಬ್ಬಿಗರ ಕಾವ" ಕನ್ನಡ ಸಾಹಿತ್ಯಾಕಾಶದಲ್ಲಿ ಸ್ವ ಪ್ರಭೆಯಿಂದ

ಬೆಳಗುವ ನಕ್ಷತ್ರವಾಗಿದೆ. ಈ ಕೊಡುಗೆ ಸಾಹಿತ್ಯ ಕ್ಷೇತ್ರಕ್ಕೆ ಉತ್ತರ ಕನ್ನಡ ಜಿಲ್ಲೆಯದಾಗಿದೆ. "ಪೌಲೋಮ ಆಸ್ತಿಕ ಪರ್ವ" ಬರೆದ ಸದಾನಂದ ಕವಿ ಉತ್ತರ ಕನ್ನಡದವನೆಂದು ಹೇಳಬಹುದು. ಈ ಸದಾನಂದ ಕವಿಯೇ ಭಾಗವತದ ಹನ್ನೊಂದನೆ ಸ್ಕಂಧ ಬರೆದಿದ್ದಾನೆ. ಈ ಕಾವ್ಯಗಳ ಹಸ್ತಪ್ರತಿಗಳೆಲ್ಲ ಉತ್ತರ ಕನ್ನಡ ಜಿಲ್ಲೆಯಲ್ಲಿಯೇ ದೊರಕುತ್ತವೆ. ಈ ಕಾವ್ಯವನ್ನು ಡಾ॥ ಕೆ.ಜಿ. ಶಾಸ್ತ್ರಿಯವರು(ಉತ್ತರ ಕನ್ನಡದವರು) ಉತ್ತಮವಾಗಿ ಸಂಪಾದನೆ ಮಾಡಿ ಪ್ರಕಟಿಸಿದ್ದಾರೆ. ಈ ಕಾವ್ಯದ ವಿಮರ್ಶೆಯಲ್ಲಿ ಅವರು ಬರೆಯುತ್ತಾ "ಈ ಕವಿಯ ಮೇಲೆ ಕುಮಾರವ್ಯಾಸನ ಪ್ರಭಾವ ಗಾಢವಾಗಿ ಬಿದ್ದಿದೆ. ಆದರೂ ಕವಿಯು ಪರಿಣಾಮಕಾರಿಯಾಗಿಯೂ, ಸತ್ವಯುತವೂ ಆಗಿರುವ ಸ್ವಂತ ರೀತಿಯಲ್ಲಿಯೂ ಮಾತನ್ನು ನುಡಿಸಬಲ್ಲ. ಕಲ್ಪನಾ ಸಾಮರ್ಥ್ಯವನ್ನು ತೋರಬಲ್ಲ. ಭಾವಗಳಲ್ಲಿ ವಿರಹವೇ, ಕೋಪವೇ, ಪ್ರತಾಪವೇ, ಯಾವುದೇ ಆದರೂ ಅಚ್ಚೊತ್ತಿನಿಲ್ಲುವ ರೀತಿಯಲ್ಲಿ ವರ್ಣಿಸುತ್ತಾನೆ. ಶಬ್ದ ಹಾಗೂ ಅರ್ಥಾಲಂಕಾರಗಳಲ್ಲಿ ಅನುಪ್ರಾಸ ಉಪಮೆಗಳನ್ನು ಕವಿ ನಿರಾಯಾಸವಾಗಿಯೂ ನವೀನವಾಗಿಯೂ ಬಳಸಬಲ್ಲವನಾಗಿದ್ದಾನೆ."

"ಕನ್ನಡ ಭಾಗವತ" ಗ್ರಂಥ ಕನ್ನಡ ಸಾಹಿತ್ಯದಲ್ಲಿಯೇ ಬೃಹತ್ ಗ್ರಂಥವಾಗಿದೆ. ಹನ್ನೆರಡು ಸಾವಿರಕ್ಕೂ ಹೆಚ್ಚಿನ ಭಾಮಿನಿಷಟ್ಪದಿಗಳಿವೆ. ಕವಿಯ ಹೆಸರು ಖಚಿತವಾಗಿ ತಿಳಿಯದು "ನಿತ್ಯಾತ್ಮ ಶುಕ ಯೋಗಿ" ಎಂಬುದು ಆತನ ಬಿರುದು ಅಥವಾ ಕಾವ್ಯನಾಮ. ಪ್ರತಿ ಸಂಧಿಯ ಕೊನೆಯಲ್ಲಿಯೂ 'ನಿತ್ಯಾತ್ಮ' ಎಂಬ ಅಂಕಿತವನ್ನು ಆತನು ಬಳಸಿದ್ದಾನೆ. ಈ ಕವಿಯ ಅಂಕಿತ

'ನಿತ್ಯಾತ್ಮ' ಎಂದೇ ಇಟ್ಟುಕೊಳ್ಳಬೇಕು. "ಶುಕ" ಶಬ್ದವನ್ನು ತನ್ನ ಬಿರುದಾಗಿ ಧರಿಸಿದನೆಂದು ತೋರುತ್ತದೆ. ಕೆಲವು ಕಡೆಯಲ್ಲಿ "ಇದು ಸದಾನಂದಾಖ್ಯಯೋಗಿಯ ತೊದಲ ನುಡಿ." "ಗೋಪಿನಾಥನು ಮಂಗಳನೀವನು ಸದಾನಂದಾಖ್ಯ ಮುನಿವರಗೆ." "ಯೋಗೀಂದ್ರನಖಿಳೋದಿತ ಸದಾನಂದ ಮುದದೊಳಭಿವರ್ಣಿಸಿದಂ" ಆದಕಾರಣ ಕವಿಯ ಹೆಸರು ಸದಾನಂದನೆಂದಿರಬಹುದೆ ? ಯೋಗಿ, ಯೋಗೀಂದ್ರ, ಅಚ್ಯುತಾರಣ್ಯನೆಂಬ ಯತಿಯನ್ನು ಬಹಳವಾಗಿ ಹೊಗಳಿ ಆತನ ಪ್ರೇರಣೆಯಿಂದ ಭಾಗವತವನ್ನು ಬರೆದಂತೆ ಹೇಳಿ ಕೊಂಡಿರುವವರಿಂದ ಕವಿಗೆ ಅಚ್ಯುತಾರಣ್ಯನೆಂಬ ಯತಿಗಳು ಗುರುಗಳಾಗಿರಬಹುದು. ಕನ್ನಡ ಭಾಗವತದ ಹನ್ನೊಂದು ಹನ್ನೆರಡನೆಯ ಸ್ಕಂಧಗಳ ಕೊನೆಯಲ್ಲಿ ಚಾಟು ವಿಠಲನೆಂಬುವನು ಭಾಗವತವನ್ನು ಬರೆದನೆಂದು ಹೇಳಿದೆ. ಅದಕ್ಕಾಗಿ ಕವಿಚರಿತೆಯಲ್ಲಿ ನರಸಿಂಹಾಚಾರ್ಯರು ಚಾಟು ವಿಠಲ ರಚಿಸಿದನೆಂದು ಹೇಳಿದ್ದಾರೆ. ಆದರೆ ಬೆಟಗೇರಿ ಕೃಷ್ಣಶರ್ಮಾರವರು ಐದು ಜನ ಕವಿಗಳು ಇದನ್ನು ಬರೆದಿರಬೇಕೆಂದು ತರ್ಕಿಸಿ ನಿತ್ಯಾತ್ಮನಾಥ, ವಿದ್ಯಾನಾಥ, ನಿರ್ವಾಣನಾಥ, ಚಾಟು ವಿಠಲನಾಥ, ಸದಾನಂದ ಯೋಗಿ ಬರೆದಿರಬೇಕೆಂದು ಹೇಳುತ್ತಾರೆ. ಮೂವರೆ ಬರೆದಿರಬೇಕೆಂದು ಹೇಳಲು ಅವಕಾಶವಿದೆ. ಶ್ರೀ ಎನ್. ಕೆ. ಹೆಗಡೆಯವರು ಸಂಪಾದಿಸಿದ ದೇವಿ ಮಹಾತ್ಮೆಯಲ್ಲಿ ಈ ರೀತಿಯ ಒಂದು ಷಟ್ಪದಿ ಬರುತ್ತದೆ.

ಸ್ಕಂಧ ಹತ್ತಕೆ ಪದವನಾರಾ
ಧ್ಯೇಂದ್ರ ಕವಿ ವಿರಚಿಸಿದನಾ ಸದ
ನಂದವರ ಯೋಗೀಂದ್ರನೇಕಾದಶಕೆ ನಿರ್ಮಿಸಿದ

ಇಂದು ವಿಕ್ಕಿನಕೆನ್ನ ಮತಿ ಬಂ
ದಂದದಲಿ ಬಣ್ಣಿಸುವೆನಿದರಲಿ
ಕುಂದದೀವುದು ಸತ್ಕವೀಂದ್ರರು ಸನ್ಮತಿಯ ನಿದಕೆ ॥

ಕನ್ನಡ ಭಾಗವತವನ್ನು ರಚಿಸಿದವರೆಲ್ಲರೂ "ನಿತ್ಯಾತ್ಮ" ಎಂಬ ಅಂಕಿತವನ್ನು ಉಪಯೋಗಿಸಿದ್ದಾರೆ. ಆರಾಧ್ಯೇಂದ್ರ, ಸದಾನಂದಯೋಗಿ, ಮತ್ತು ನಿರ್ವಾಣನಾಥ ಇವರೇ ಆ ಮೂವರು. ಈ ಕವಿಗಳು ಉತ್ತರ ಕನ್ನಡದವರೆಂದೂ ಹರೀತಕೀ ಪುರ ಅಂದರೆ ಕುಮಟಾ ಸಿರ್ಸಿ ತಾಲೂಕುಗಳ ಮೇರೆಯಲ್ಲಿ ಬರುವ ಹರೀಟೆ ಅವರ ವಾಸಸ್ಥಾನವೆಂದೂ ಬೆಟಗೇರಿ ಕೃಷ್ಣ ಶರ್ಮಾ ಅಭಿಪ್ರಾಯ ಪಡುತ್ತಾರೆ. ಇದು ಸಂಸ್ಕೃತ ಶ್ರೀಮದ್ಭಾಗವತ ಪುರಾಣದ ವಿಸ್ತೃತವಾದ ಅನುವಾದ ರೂಪವಾಗಿದೆ. ಆದರೂ ಅಲಂಕಾರಗಳಲ್ಲಿಯೂ ಇತರ ಕಲ್ಪನೆಗಳಲ್ಲಿ ಹೊಸ ಸೊಗಸನ್ನು ತಂದು ಕಥೆಯನ್ನು ಬೆಳೆಸಲಾಗಿದೆ. ದೇಸಿ ನುಡಿಗಳು ತುಂಬಿವೆ. ಮಳೆಯಲ್ಲಿ ಓಡಿ ಬರುವ ಗೋಗಳ ಚಿತ್ರ, ವಸ್ತ್ರಾಪಹರಣದ ಚಿತ್ರ, ಕೊಳಲುಲಿಯನ್ನು ಕೇಳಿ ಮೈ ಮರೆತು ಅಡವಿಗೆ ಓಡಿ ಬರುವ ಗೋಪಿಯರ ಚಿತ್ರ ಹೃದಯಂಗಮವಾಗಿದೆ.

ಕನ್ನಡದ ಕೀರ್ತಿ ಘನತೆ ಸಂಸ್ಕೃತಕ್ಕೂ ತಲುಪುವಂತೆ ಅದರಲ್ಲಿ ಗೌರವ ಬೆಳೆಯುವಂತೆ ಮಾಡಿದ ಮಹಾಪುರುಷರಲ್ಲಿ ಭಟ್ಟಾಕಳಂಕನೂ ಒಬ್ಬ. ಕರ್ನಾಟಕ ಶಬ್ದಾನುಶಾಸನದ ಮಂಗಿತಾಯದಲ್ಲಿ ತನ್ನ ಮತ್ತು ತನ್ನ ಕೃತಿಯ ವಿಷಯದಲ್ಲಿ ವಿವರವಾಗಿ ಬರೆದಿರುವದರಿಂದ ಆತನ ವಿಷಯ ತಿಳಿದುಕೊಳ್ಳಲು ತುಂಬಾ

ಅನುಕೂಲವಾಗಿದೆ. "ಕರ್ನಾಟಕ ಶಬ್ದಾನುಶಾಸನಂ" ವ್ಯಾಕರಣವು ಕನ್ನಡ ಸಾಹಿತ್ಯಕ್ಕೆ ಬಹುಮೂಲ್ಯ ಕಾಣಿಕೆಯಾಗಿದೆ. ತರ್ಕಶಾಸ್ತ್ರ, ನ್ಯಾಯಶಾಸ್ತ್ರ, ಗಣಿತಶಾಸ್ತ್ರ, ಹಾಗೂ ಜ್ಯೋತಿಶ್ಶಾಸ್ತ್ರದಲ್ಲಿ ಪ್ರಾವಿಣ್ಯ ಪಡೆದಿದ್ದ ಭಟ್ಟಾಕಳಂಕನು ಇತರ ಭಾಷೆಯವರಿಗೆ ಕನ್ನಡ ವ್ಯಾಕರಣ ಕಲಿಯಲು ಅನುಕೂಲವಾಗಲೆಂಬ ಉದ್ದೇಶವಿಟ್ಟುಕೊಂಡೇ, ಸಂಸ್ಕೃತದಲ್ಲಿ ರಚಿಸಿರಬೇಕು. ಇವನು ಷಡ್ಭಾಷಾ ಕವಿಯಾಗಿದ್ದನೆಂದು ರಾಜಾವಳಿ ಕಥೆಯಲ್ಲಿ ಬರುತ್ತದೆ. ಇವನು ಭಟಕಳದ ಹಾಡುವಳ್ಳಿಯವನು. ವ್ಯಾಕರಣ ರಚಿತವಾದ ಕಾಲ ಕ್ರಿ. ಶ. ೧೬೦೪. ಒಟ್ಟಿನಲ್ಲಿ ಈ ವ್ಯಾಕರಣ ಗ್ರಂಥವು ಭಾರತೀಯ ಶಾಸ್ತ್ರ ಸಾಹಿತ್ಯಕ್ಕೆ ಹಾಗೂ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಉತ್ತರ ಕನ್ನಡ ಜಿಲ್ಲೆಯ ಅಪೂರ್ವ ಕೊಡುಗೆಯಾಗಿದೆ.

ಸಾಳ್ವನು ಹೊನ್ನಾವರ ತಾಲೂಕಿನ ಗೇರಸಪ್ಪೆಯವನು; ಜೈನ ಕವಿ. ಇವನು ಭಾರತ, ರಸರತ್ನಾಕರ, ವೈದ್ಯಸಾಂಗತ್ಯ, ಶಾರದಾ ವಿಲಾಸ ಬರೆದಿದ್ದಾನೆ. 'ಭಾರತ' ಭಾಮಿನಿ ಷಟ್ಪದಿಯಲ್ಲಿದೆ. ಇದಕ್ಕೆ ನೇಮೀಶ್ವರ ಚರಿತೆ ಎಂಬ ಬೇರೊಂದು ಹೆಸರಿದೆ. ಇದರಲ್ಲಿ ಹರಿವಂಶ, ಕುರುವಂಶ ಇವುಗಳ ಚರಿತ್ರೆ ಇದೆ. "ರಸರತ್ನಾಕರವು" ಹೆಸರಿಗೆ ತಕ್ಕಂತೆ ರಸದ ವಿಷಯವನ್ನು ಪ್ರತಿಪಾದಿಸುತ್ತದೆ. ಶೃಂಗಾರ ಪ್ರಪಂಚ, ರಸ ವಿವರಣ, ನಾಯಕ ನಾಯಿಕ ವಿವರಣ, ಭಾವಾದಿಕರಣ ಎಂದು ನಾಲ್ಕು ಆಶ್ವಾಸಗಳಿವೆ. "ಶಾರದಾವಿಲಾಸ" ಕಾವ್ಯದಲ್ಲಿರುವ ಧ್ವನಿಯ ವಿಷಯವನ್ನು ಪ್ರತಿಪಾದಿಸುತ್ತದೆ. 'ವೈದ್ಯ ಸಾಂಗತ್ಯದ' ಕೆಲವು ಪದ್ಯಗಳಲ್ಲಿ ವರಕವಿ ಸಾಳ್ವನ ಮಾತವಿ ಎಂದು

ಮುಗಿಯುವವರಿಂದ ಈ ಕಾವ್ಯವು ಸಾಳ್ವನದೇ ಎಂದು ಹೇಳ ಬಹುದಾದರೂ ಮತ್ತಿದಿ ಅಂದಾಗ ಬೇರೊಬ್ಬ ಕವಿ ಕಾವ್ಯ ಬರೆದು ಸಾಳ್ವನ ಅಭಿಪ್ರಾಯ ಉಲ್ಲೇಖಿಸಿದಂತೆ ಅನಿಸುತ್ತದೆ.

ಕ್ರಿ. ಶ. ೧೪ ಮತ್ತು ೧೫ನೆಯ ಶತಮಾನಗಳ ನಡುವೆ ಉತ್ತರ ಕನ್ನಡ ಜಿಲ್ಲೆಯ ಯಾಣದಲ್ಲಿ ಭೈರವೇಶ್ವರನ ಭಕ್ತನಾಗಿದ್ದ ವಿಪ್ರನೊಬ್ಬನು ಬತ್ತಲೇಶ್ವರನೆಂಬ ಕಾವ್ಯನಾಮ ದಿಂದ ಕೌಶಿಕ ರಾಮಾಯಣ ಬರೆದಿದ್ದಾನೆ. ಈ ಕವಿಯ ಕುರಿತು ವಿವಾದವುಂಟು. ಪ್ರೌಢದೇವರಾಯನ ಆಸ್ಥಾನದಲ್ಲಿದ್ದ ನೂರೊಂದು ವಿರಕ್ತರಲ್ಲಿ ಬತ್ತಲೇಶ್ವರನು ಒಬ್ಬನೆಂಬ ಉಲ್ಲೇ ಖವೇ ಇದಕ್ಕೆ ಕಾರಣ. ಶ್ರೀ ಎಸ್.ಎನ್. ಕೃಷ್ಣ ಜೋಯಿಸರು ಇಬ್ಬರು ಬತ್ತಲೇಶ್ವರರಿರುವರೆಂದೂ ಅಭಿಪ್ರಾಯ ಪಡುತ್ತಾರೆ. ಇದು ಸತ್ಯವೆಂದು ತೋರುತ್ತದೆ. ಈ ಕವಿಯು ಉತ್ತರ ಕನ್ನಡ ದೇಸಿ ಮಾತುಗಳನ್ನೂ, ಗಾದೆಗಳನ್ನೂ ಬಹಳವಾಗಿ ಉಪ ಯೋಗಿಸಿದ್ದಾನೆ. ಯಾಣದ ಭೈರವೇಶ್ವರನನ್ನು ಸ್ತುತಿಸಿ ಹಲ ವಾರು ಕಡೆ ಭೈರವ ಎಂಬ ಪದವನ್ನು ಬಳಸುವುದನ್ನು ನೋಡಿ ದರೆ, ಇಲ್ಲಿ ಕವಿಯ ಹೆಸರು ಆತನ ಆರಾಧ್ಯ ದೇವರಾದ ಯಾಣದ ಭೈರವೇಶ್ವರನೇ ಎಂದು ತಿಳಿಯಲು ಆಸ್ಪದವುಂಟು. ಬತ್ತಲೇಶ್ವರನ ರಾಮಾಯಣದ ತಾಡವೋಲೆಯ ಪ್ರತಿಯಲ್ಲಿಯೇ ಕೌಸಲ್ಯಾ ವಿವಾಹ ಮೂಲಕಾಸುರನ ಕಾಳಗ ಕಾವ್ಯಗಳನ್ನು ಬರ ದಿಡುವ ಸಂಪ್ರದಾಯವಿತ್ತು. ಈ ಮೂರೂ ಗ್ರಂಥಗಳನ್ನೂ "ವಾಲಗಳ್ಳಿ ರಾಮಾಯಣ" ವೆಂದು ಕೆಲವರು ಕರೆಯುತ್ತಾರೆ. ಆದರೆ "ಕೌಸಲ್ಯಾವಿವಾಹ" ವನ್ನು ಮಾತ್ರ ವಾಲಗಳ್ಳಿ ರಾಮಾ ಯಣವೆಂದು ಕರೆಯಬೇಕು. ಬತ್ತಲೇಶ್ವರನ ರಾಮಾಯಣವು

ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿದೆ. ಇದನ್ನು ಶಿವರಾಮ ಕೌರಾದಿತರು "ಕೌಶಿಕ ರಾಮಾಯಣ"ವೆಂಬ ಹೆಸರಿನಿಂದ ಪ್ರಕಟ ಮಾಡಿದ್ದಾರೆ. ಕೆಲ ವಿದ್ವಾಂಸರು ಈ ಹೆಸರು ಕಾರಂತರ ಕೊಡುಗೆ ಅಲ್ಲ ಎಂದು ಅಭಿಪ್ರಾಯ ಪಡುತ್ತಾರೆ. ಕಾರಂತರು ಕವಿಯ ಮೇಲೆ ಬರೆಯುತ್ತಾ 'ಅವನ ಸರಳ ದೇಸಿಗಳು, ಉಪ ಮೆಗಳು, ಕಣ್ಮುಂದೆ ಚಿತ್ರಕಟ್ಟಬಲ್ಲ ವರ್ಣನೆಗಳು ನನಗೆ ಸಂತೋಷವನ್ನು ಕೊಟ್ಟಿವೆ' ಎಂದು ಹೇಳಿದ್ದಾರೆ. ತನ್ನ ಕಥೆಯನ್ನು ಕವಿ ಹರಿಕಥಾ ಪರಮಾನ್ನವೆಂದು ಕರೆದಿದ್ದಾನೆ. "ಲಲಿತವಹ ಕನ್ನಡದ ನುಡಿಯಲಿ" ಕೌಶಿಕ ರಾಮಾಯಣ ಬರೆದ ಬತ್ತಲೇಶ್ವರ ಕವಿ ಉತ್ತರ ಕನ್ನಡದ ವಾಲ್ಮೀಕಿ ಎಂದರೆ ಅತಿಶಯೋಕ್ತಿಯಾಗಲಾರದು. ರೂಪಕ, ಉಪಮೆ, ಉತ್ಪ್ರೇಕ್ಷೆ, ಸ್ವಭಾವೋಕ್ತಿ, ಭಾವಾವೇಶ, ನಾಟಕೀಯ ಸಂವಾದ, ನಿರ್ಭರತೆ, ಕಣ್ಣಿಗೆ ಕಟ್ಟುವಂಥ ದೃಶ್ಯವರ್ಣನೆ ಉದ್ದಕ್ಕೂ ದೊರಕುತ್ತವೆ. ಕರುಣ ರಸ ನಿರೂಪಣೆಯಲ್ಲಿ ಕವಿಯ ಪ್ರತಿಭೆ ವಿಶೇಷವಾಗಿ ಕಾಣುತ್ತಿದೆ. ಸಂಪೂರ್ಣ ಕಾವ್ಯ ಓದಿ ನೋಡಿದರೆ ಮಹಾಕವಿಯ ಸತ್ವ ಕಂಡು ಬರುತ್ತದೆ.

ದೇವಿ ಮಹಾತ್ಮೆ ಬರೆದ ಕವಿಗಳು ಇಬ್ಬರಿದ್ದಾರೆ. ಸಂಸ್ಕೃತ ದೇವಿ ಮಹಾತ್ಮೆಯ ಕಥೆಯನ್ನು ಆಧರಿಸಿ ಚಿದಾನಂದ ವದೂತರು ೭೯೬ ಪದ್ಯಗಳಿರುವ ಭಾಮಿನಿ ಷಟ್ಪದಿಯಲ್ಲಿ ಬರೆದರೆ, ಇನ್ನೊಂದು ದೇವಿ ಮಹಾತ್ಮೆ ಬರೆದ ಕವಿ ತನ್ನ ಹೆಸರನ್ನು ಹೇಳದಿದ್ದರೂ ಉತ್ತರ ಕನ್ನಡ ಜಿಲ್ಲೆಯ ಬ್ರಾಹ್ಮಣ ಕವಿ ಎಂಬುದರಲ್ಲಿ ಸಂದೇಹವಿಲ್ಲ. ಈ ಕಾವ್ಯವು ಒಂದು ಪುರಾಣ ಕಾವ್ಯವಾಗಿದ್ದು ೪೫೧ ಭಾಮಿನಿ ಷಟ್ಪದಿಗಳಿವೆ. ಇದರಲ್ಲಿ ಅಷ್ಟಾ

ದಶ ವರ್ಣನೆಯಿಲ್ಲ. ಕವಿಯು ದೇವೀಭಕ್ತಿಯ ಮಹತ್ವವನ್ನು ಎತ್ತಿ ಹಿಡಿದಿದ್ದಾನೆ. ಸಂಸ್ಕೃತ ಮಾರ್ಕಾಂಡೇಯ ಪುರಾಣದ ದೇವಿಮಹಾತ್ಮೆಯನ್ನು ಅನುಸರಿಸಿ ಬರೆದಿದ್ದಾನೆ.

ಭೈರವ ಪುರಾಣ ಬರೆದ ಕವಿ ಯೋಗಿ ನಿತ್ಯಾನಂದ, ಉತ್ತರ ಕನ್ನಡ ಜಿಲ್ಲೆಯ ಯಾಣದ ಸಮೀಪದಲ್ಲಿ ವಾಸಮಾಡಿರ ಬಹುದೆಂದು ಊಹಿಸಬಹುದು. ಭಸ್ಮಾಸುರನ ಸಂಹಾರದ ವಿಷಯವಿಲ್ಲ. ಕೃಷ್ಣಾಕ್ಷ ರಕ್ತಾಕ್ಷ ಎಂಬ ರಾಕ್ಷಸರನ್ನು ಭೈರವೇಶ್ವ ರನು ಸಂಹಾರ ಮಾಡಿದ ವಿಷಯ ಇವರಲ್ಲಿದೆ. ಇದು ಉತ್ತಮ ಕಾವ್ಯವಾಗಿದೆ.

"ಮೂಲಕಾಸುರನ ಕಾಳಗ" ಭಾಮಿನಿ ಷಟ್ಪದಿಯಲ್ಲಿ ಬರೆಯಲ್ಪಟ್ಟಿದೆ. ನಿರ್ವಾಣಲಿಂಗ ಅಂಕಿತದಲ್ಲಿ ಬರೆದ ಈ ಕಾವ್ಯ ತಕ್ಕ ಮಟ್ಟಿಗೆ ಚೆನ್ನಾಗಿದೆ. 'ಮುದ್ಗಲನಾಥ ಶ್ರೀಶೈಲ ಮಹಾತ್ಮೆ' ಯೆಂಬ ಕಾವ್ಯ ರಚಿಸಿದ್ದಾನೆ. ಇವನು ಹವ್ಯಕ ಬ್ರಾಹ್ಮಣ. ೨೧೨ ಭಾಮಿನಿ ಷಟ್ಪದಿಗಳಿವೆ. ಸಾಮಾನ್ಯ ಕಾವ್ಯಗುಣ ಉಳ್ಳ ದ್ದಾಗಿದೆ. ಮಹಾಭಾರತದ ಯುದ್ಧದಲ್ಲಿ ಧರ್ಮರಾಜನಿಗೆ ಕುಲ ವಧೆಯ ದೋಷಬರುತ್ತದೆ. ಗುರು ರೋಮಶನ ಹತ್ತಿರ ಹೋಗಿ ಭ್ರಾತೃ-ಹತ್ಯಾ ದೋಷದ ನಿವಾರಣೋಪಾಯವನ್ನು ಕೇಳಲು ಎಷ್ಟೇ ಬ್ರಹ್ಮ-ಹತ್ಯಾ ಪಾಪವನ್ನು ಮಾಡಿದವನಾದರೂ ಒಮ್ಮೆ ಶ್ರೀಶೈಲಕ್ಕೆ ಹೋದರೆ ಅವನ ಪಾಪಗಳೆಲ್ಲ ಸರ್ವನಾಶವಾಗು ವವು. ಅಲ್ಲಿಗೆ ಹೋಗು ಎಂದು ಹೇಳುತ್ತಾನೆ.

ಗೇರಸೊಪ್ಪೆಯ ಗುರುವಾದ ಭೈರವರಾಯನ ಆಜ್ಞೆ ಯಂತೆ ಆದಿಯಪ್ಪನು "ಧನ್ಯಕುಮಾರ ಚರಿತೆ" ಬರೆದಿದ್ದಾನೆ.

ಇವನು ಜೈನ ಕವಿ. ಈ ಕಾವ್ಯ ಸಾಂಗತ್ಯದಲ್ಲಿದ್ದು ೪೧೦ ಪದ್ಯಗಳಿವೆ. ಪಶುಪಾಲನೆಂಬ ಅರಸನು ಭೋಗಾವತಿ ಪುರವನ್ನು ಆಳುತ್ತಿದ್ದನು. ಅವನ ಹೆಂಡತಿ ಪದ್ಮಾಕ್ಷಿ ಮಗ ಅಕೃತಪುಣ್ಯ. ಈ ಮಗನು ಹುಟ್ಟಿದ ಕೂಡಲೆ ತಂದೆ ತಾಯಿಯರಿಗೆ ದಾರಿದ್ರ್ಯ ಪ್ರಾಪ್ತವಾಗುತ್ತದೆ. ಈ ದಾರಿದ್ರ್ಯದಲ್ಲಿಯೇ ತಂದೆ ಸಾಯಲು ಮಗನಾದ ಅಕೃತಪುಣ್ಯನು ಭಿಕ್ಷೆ ಬೇಡಿ ಜೀವಿಸುತ್ತಿದ್ದನು. ಬಂಧುಗಳ ನಿಂದೆಯನ್ನು ಸಹಿಸಲಾರದೆ ಬೇರೆ ಊರಿಗೆ ಹೋಗಿ ಬಲಭದ್ರನೆಂಬ ವೈಶ್ಯನ ಮನೆಯಲ್ಲಿ ಕೆಲಸಕ್ಕಾಗಿ ಇರಲು ಆ ವೈಶ್ಯನ ಮಕ್ಕಳು ಅನುಚಿತವಾದ ಕೆಲಸ ಮಾಡಲು ಹಿಂಸೆ ಮಾಡಿ ಹೇಳಿದುದರಿಂದ ಆ ಹಿಂಸೆಯನ್ನು ತಡೆಯಲಾರದೆ ಸಮೀಪದಲ್ಲಿದ್ದ ಋಷ್ಯಾಶ್ರಮಕ್ಕೆ ಹೋಗಿ ಮುನಿಸೇವೆಯಲ್ಲಿದ್ದು ತೀರಿಕೊಂಡನು. ಅದೇ ವೈಶ್ಯ ಬಲಭದ್ರನಿಗೆ ಧನ್ಯಕುಮಾರನೆಂಬ ಮಗನಾಗಿ ಐಶ್ವರ್ಯ ಹಾಗೂ ಖ್ಯಾತಿ ಪಡೆದು ವಂಶ ಉದ್ಧರಿಸುತ್ತಾನೆ.

ಪಾಯಣ್ಣ ಜೈನ ಕವಿ. ಕಾಲ ೧೭೪೮ ಗುರು ನಯಸೇನ. ಸ್ಥಳ ಸಂಗೀತಪುರ. ಇವನು ಬರೆದ ಕಾವ್ಯ 'ಅಹಿಂಸಾ ಚರಿತೆ'. ಇದಕ್ಕೆ ಪಂಚಾಣುವ್ರತ ಚರಿತೆಯೆಂಬ ಹೆಸರೂ ಉಂಟು. "ಮುಕುರದಂತೆ ಬೆಳಗಲಿ ಎನ್ನ ಕುಲ" ಎಂದು ಈ ಗ್ರಂಥ ಬರೆದಂತೆ ಹೇಳುತ್ತಾನೆ. "ಭೇಕನರ್ಥಾಖ್ಯಾನ" ಎಂಬ ಸಾಂಗತ್ಯವೂ ಇವನದಾಗಿರಬಹುದೆಂದು ಊಹಿಸಲಾಗುತ್ತದೆ.

'ಚಿದಾನಂದವಧೂತರು' ಬ್ರಾಹ್ಮಣ ಕವಿ. ಕಾಲ ೧೭೫೦. ಇವರು ಜ್ಞಾನ ಸಿಂಧು, ಕಾಮ ವಿಡಂಬನ, ದೇವಿಮಹಾತ್ಮೆ, ಬಗಳಾಂಬಾ ಸ್ತೋತ್ರ, ಚಿದಾನಂದರ ವಚನ, ಪಂಚೀಕರಣ,

ತತ್ತ್ವಚಿಂತಾಮಣಿ, ನವಚಕ್ರಕುಲ ರೇಖಾಲಕ್ಷಣ ಗ್ರಂಥಗಳನ್ನು ಬರೆದಿದ್ದಾರೆ.

'ಜ್ಞಾನ ಸಿಂಧು' ಭಾಮಿನಿ ಷಟ್ಪದಿಯಲ್ಲಿದೆ. ಅದ್ವೈತ ವೇದಾಂತವ ವಿಷಯ ವಿವರಿಸಲಾಗಿದೆ. ಸುಲಭ ಶೈಲಿಯಲ್ಲಿ ಬರೆಯಲಾಗಿದೆ. "ತಾನೆ ತನ್ನನೆ ತಿಳಿದು ತಾನೇ ತಾನಾಗಿಯೇ ತನ್ನಯ ಅನುಭವ ತುಂಬಿಕೊಂಡಿರಲು ಜ್ಞಾನ ಸಿಂಧುವು ಎಂಬ ಹೆಸರಾಯ್ತು" ಎಂದಿದ್ದಾನೆ. ಸರ್ವಶಾಸ್ತ್ರಗಳ ಹಾಗೂ ಗೀತೆಯ ಸಾರವನ್ನು ಇದರೊಳಗೆ ಇರಿಸಿದ್ದೇನೆ. ಎಂದಿದ್ದಾನೆ. ೪೯ ಅಧ್ಯಾಯಗಳಿವೆ.

"ಕಾಮ ವಿಡಂಬನ" ಇದರ ಇನ್ನೊಂದು ಹೆಸರು. "ಹೋಳಿ ಪದಗಳು" ೧೧೦ ಪದ್ಯಗಳಿವೆ. ಇದರಲ್ಲಿ ಬರುವ ಒಂದು ಪದ್ಯ:

ಸಚ್ಚಿದವರ ಕೊರಳ ಕೊಯ್ದು
ಬೆಚ್ಚಿದವರ ಬೆಸಿಗೆ ಬಿಡಿಸಿ
ಮೆಚ್ಚಿದವರ ಮೋಸಗೊಳಿಸಿ ಧನವ ಗಳಿಸುತ
ಮಿಂಚಿ ಬರಲು ಸೆಟೆಯು ನುಡಿದು
ಒಂಚಿ ಬದುಕಲೆಳಸಿದವಗೆ
ಸಂಚಕಾರಗೊಡದೆ ಬಿಡರು ಯಮನ ಧೂತರು.

"ದೇವಿ ಮಹಾತ್ಮೆ" ಸಂಸ್ಕೃತ ದೇವಿ ಮಹಾತ್ಮೆಯ ಅನುವಾದವಾಗಿದೆ. ಭಾಮಿನಿ ಷಟ್ಪದಿಯಲ್ಲಿದ್ದು ೭೯೬ ಪದ್ಯಗಳಿವೆ.

ಏರಿಸಿದಳೈ ದೇವಿ ಧನುವನು
ಕಾರಿಸಿದಳಸುಗಳನು ದೈತ್ಯರ
ತೂರಿದಳು ಕೂರ್ಗಣೆಯ ಗರಿ ಗಾಳಿಯುಲುಳಿಯಂದಂತೆ
ಹಾರಿದವು ತಲೆ ಕುದುರೆ ಗಜಗಳ
ಸೋರಿಡುವ ರಕ್ತದಲಿ ದಿನಪನ
ಚಾರು ಕಿರಣಗಳಡಗಿದವು ಕತ್ತಲೆಯು ಕವಿಯಿತ್ತು

"ಬಗಳಾಂಬಾ ಸ್ತೋತ್ರ" ಪರ್ವತ ನಿವಾಸಿಯಾದ ಬಗಳಾಂಬೆಯ ಸ್ತುತಿರೂಪವಾದ ಸ್ತೋತ್ರ.

"ಕರವಿಡಿಯೆ ಭಿಕ್ಷುಕನ ನೀನು ತತ್‌ಕ್ಷಣಕೆ
ದೊರೆಯೆನಿಸಿಕೊಂಡನವ ಸಕಲ ಭುವನಕ್ಕೆ"

ಇವರ ವಚನಗಳೆಂದು ಹೆಸರಿದ್ದರೂ ಹಾಡುಗಳಾಗಿವೆ.

ಯಮ ನಿಯಮಾಸನವೆಂಬುವು ಏಕೆ
ಕಮಲಾಸನವನು ಒಲಿಯಲದೇಕೆ
ಕ್ರಮದಲಿ ವಾಯುವ ಬಿಗಿಯಲದೇಕೆ
ಭ್ರುಮಿತದಿ ಬ್ರಹ್ಮವ ಕೂಡಲದೇಕೆ

"ಪಂಚೀಕರಣ"ದಲ್ಲಿ ೧೫ ವಚನಗಳಿದ್ದು ಸದ್ಗುರು ಪ್ರಭುವೇ ಎಂದು ಮುಗಿಯುತ್ತದೆ. "ಕೇಳಯ್ಯ ದೇಹ ಬೀಳಲು ಪೃಥ್ವಿಯ ಕೂಡಿತು........................ ಚಿದಾನಂದ ಸದ್ಗುರುವೆ. "ತತ್ವ ಚಿಂತಾಮಣಿ" ಇದು ಗದ್ಯ ರೂಪವಾಗಿದೆ. ಇದರಲ್ಲಿ ಪ್ರಣವನಾದ ಬಿಂದು ಸ್ವರೂಪ, ಮಾಯಾ ಸ್ವರೂಪ, ಈಶ್ವರ ಸ್ವರೂಪ, ಆತ್ಮ ಸ್ವರೂಪ, ಪರಬ್ರಹ್ಮ ಸ್ವರೂಪ, ಮೋಕ್ಷ ಸ್ವರೂಪ ಮುಂತಾದ ವಿಷಯಗಳು ನಿರೂಪಿಸಲ್ಪಟ್ಟಿವೆ.

'ನವಚಕ್ರ ಕುಲ ರೇಖಾ ಲಕ್ಷಣ'ದಲ್ಲಿ ಶಿವ ಪಾರ್ವತಿಯರ ಸಂವಾದದ ಶ್ಲೋಕಗಳನ್ನು ಉದಾಹರಿಸಿ ಟೀಕೆ ಬರೆದಿದ್ದಾನೆ. ವೇದಾಂತದ ವಿಷಯಗಳನ್ನು ಗದ್ಯರೂಪವಾಗಿ ಸರಳ ಶೈಲಿಯಲ್ಲಿ ಹೇಳಲಾಗಿದೆ.

"ಸುಬ್ರಹ್ಮಣ್ಯ" ಕವಿಯು ಊರು ಭಟ್ಕಳದ ಹಾಡುವಳ್ಳಿ. 'ಮುಕಾಂಬೆ' ಕುಲದೇವತೆ. "ಮೂಕಾಂಬಾ ಪಾಂಗ ಪ್ರಸಾದ ಸಾಧಿತ ಸರಸ ಸಾಹಿತ್ಯ ಸಾಮ್ರಾಜ್ಯ ಪ್ರತಿಷ್ಠಿತ ವಿದ್ವಜ್ಜನೋಪಲಾಲನೀಯ "ಭೂವಿಬುಧ" ಎಂದು ತನ್ನನ್ನು ಹೊಗಳಿಕೊಂಡಿದ್ದಾನೆ. ಇವನ ಕಾಲ ೧೭೫೦ ಎಂದು ಕವಿಚರಿತೆಕಾರರು ಅಭಿಪ್ರಾಯ ಪಡುತ್ತಾರೆ. ಇವನ ಕಾವ್ಯ "ಹನುಮದ್ರಾಮಾಯಣ" ಕಂದ ಪದ್ಯಗಳಲ್ಲಿದೆ. ರಾಮಾಯಣದ ಕಥೆಯೊಡನೆ ಹನುಮಂತನ ಜನನ ಪರಾಕ್ರಮಗಳ ವಿಷಯ ಹೇಳಲ್ಪಟ್ಟಿವೆ.

"ಶ್ರೀನಿವಾಸ" ಬ್ರಾಹ್ಮಣ ಕವಿ, ಶಾಂಡಿಲ್ಯ ಗೋತ್ರ, ಸ್ಥಳ ಗೋಕರ್ಣ, ಬರೆದ ಗ್ರಂಥ ಕೃಷ್ಣರಾಜವರ್ಷ ವರ್ಧಂತೀ ಶತಕ.

"ಗಣಪಕ್ಕ' ಗೋಕರ್ಣದವಳು, ಕಾಲ ೧೮೭೦. ಕಾವ್ಯ ರಚಿಸುವ ಅಭ್ಯಾಸ ಬಾಲ್ಯದಿಂದಲೂ ಇತ್ತು. ಇವಳಿಂದ ರಚಿಸಲ್ಪಟ್ಟ ಕೃತಿಗಳೆಂದರೆ 'ಗೋಕರ್ಣ ಮಹಾತ್ಮೆ', 'ರುಕ್ಮಿಣಿ ಪರಿಣಯ'. 'ಕೃಷ್ಣಲೀಲೆ', 'ಅನಂತ ಕಥೆಯ ಹಾಡು', 'ತುಳಸೀ ಮಾಹಾತ್ಮೆ'.

ರುಕ್ಮಿಣಿ ಪರಿಣಯದಲ್ಲಿ ಬರುವ ಒಂದು ಪದ್ಯವನ್ನು ನೋಡಬಹುದು.

ಪತಿವ್ರತೆಯರೊಳುತ್ತಮಳೆಂದೆನಿಸು
ಪತಿ ಸೇವೆಯಲಿ ನೀ ಪ್ರೌಢಳೆಂದೆನಿಸು
ಸುತರ ಪಡೆದು ಮತಿವಂತಳೆಂದೆನಿಸು
ಸತಿ ಸರಸ್ವತಿ ಅರುಂಧತಿ ಕಟಾಕ್ಷದಿ
ಮತಿವಂತೆಯಾಗಿ ಬಾಳು

ಯಕ್ಷಗಾನ ಪ್ರಭಾವ ಇವಳ ಮೇಲೆ ಬಹಳವಾಗಿದೆ. ಆ ಪ್ರಭಾವದಿಂದ ರಚಿತವಾದ ಕೃತಿ "ಕೃಷ್ಣಲೀಲೆ".

ಉತ್ತರ ಕನ್ನಡ ಜಿಲ್ಲೆಯ ಅಂಕೋಲೆಯವರಾದ 'ಲಕ್ಷ್ಮಣ ಬಾಬಣ ಪೈ' ಗೌಡ ಸಾರಸ್ವತ ಬ್ರಾಹ್ಮಣರು. ಕನ್ನಡ ಸಂಸ್ಕೃತ ಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದವರಾಗಿದ್ದರು. ಸಂಸ್ಕೃತ ಗ್ರಂಥಗಳಾದ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದಗಳಿಗೆ ಕನ್ನಡದಲ್ಲಿ ಸರಳ ಅರ್ಥಗಳನ್ನು ಬರೆದರು.

'ಶಾಂತಾಬಾಯಿ' ಭಟ್ಕಳದವಳು. ಈಕೆ ಪತಿ ಸುತರ ಅಗಲುವಿಕೆಯಿಂದ ಪರಮಾರ್ಥದ ಕಡೆಗೆ ದೃಷ್ಟಿ ಹರಿಯಿಸಿದಳು. ಸದಾ ದೇವರ ಧ್ಯಾನ ಇವಳಿಗೆ. ಜನರು "ಜೀವನ್ಮುಕ್ತೆ" ಎಂದು ಕರೆಯುತ್ತಿದ್ದರು. ಭಕ್ತಿ ವೈರಾಗ್ಯದ ಪದದ ಎರಡು ಸಾಲುಗಳು ಇಂತಿವೆ.

ಹಿಂದೆ ನಾ ಮಾಡಿದ ಕುಂದಿನ ಫಲದಿಂದ ಬೆಂದೆನು
ಬಹು ಜನ್ಮದೊಳಗೆ
ಮೂರು ತಾಪಗಳೆನ್ನ ಹಾರೈಸಿ ಸುಡುತಿವೆ ತಾರಕ
ಗುರುಪ್ರಸನ್

ಗೋಕರ್ಣದವಳಾದ ಪತ್ನೀ ಲಕ್ಷ್ಮೀಬಾಯಿ ದೇವರ ಹಾಡುಗಳನ್ನು ಬರೆದಿದ್ದಾಳೆ.

ಕೆಕ್ಕಾರ ಶಿವಭಟ್ಟರು ಸ್ವಾನುಭವಾದರ್ಶ, ತುಲಸೀ ವಿಯೋಗ ವಿಜ್ಞಾನ ಆತ್ಮ ವಿದ್ಯಾರಹಸ್ಯ, ಸೂಕ್ತಿ ಮುಕ್ತಾವಲಿ, ಪರಮಾರ್ಥ ಸಂಗ್ರಹ, ರೌದ್ರರಾಜ ಕೀರ್ತಿಮಂಜರೀ ಎಂಬ ಗ್ರಂಥಗಳನ್ನು ಬರೆದಿದ್ದಾರೆ.

ವಿದ್ಯಾ ಮಾಧವ ಪಂಡಿತರು ಹೊನ್ನಾವರ ತಾಲೂಕಿನ ಗುಣವಂತೆ ಊರಿನವರು. ಮುಹೂರ್ತ ಮಾಧವಿ ಎಂಬ ಸಂಸ್ಕೃತ ಗ್ರಂಥ ಬರೆದಿದ್ದಾರೆ. ಇವರ ಪಾರ್ವತಿ ರುಕ್ಮಿಣೀಯ ಎಂಬ ಕಾವ್ಯ ದೊರೆತಿಲ್ಲ; ಕುಮಟಾ ತಾಲೂಕಿನ ಬಾಡವೆಂಬ ಗ್ರಾಮದ ವೆಂಕಟರಮಣ ಪರಮೇಶ್ವರ ಹೆಗಡೆಯವರು "ಈಶ್ವರಾಜ್ಞಾ ಪಾಲನ" ಎಂಬ ನೀತಿಯುಕ್ತ ಗದ್ಯ ಪುಸ್ತಕ ಹಾಗೂ ಭಜನೆ ಪುಸ್ತಕ ಬರೆದಿದ್ದರು.

ಗಣಪತಿ ಶಂಕರ ಭಟ್ಟ "ಸರ್ಪಕರ್ಣೇಶ್ವರರು" ಗುರು ಚರಿತ್ರೆ, ಶ್ರೀ ಶಿವಸದ್ಗುರು, ಅಮರಪ್ರೇಮ, ಕೃಷ್ಣಕಾಶ ಪುಷ್ಪ, ಒದೆ ಕೊಟ್ಟ ಹಕ್ಕಿ, ನಿತ್ಯಾಹ್ನಿಕ ಪೂಜಾ ಕಲ್ಪದ್ರುಮಗಳೆಂಬ ಕೃತಿಗಳನ್ನು ರಚಿಸಿದ್ದಾರೆ. ಡಂಗಾ ದೇವ ನಾಯ್ಕ ಅಂಕೋಲಾ ದವರು. ಆದರೆ ಇವರ ಕಾರ್ಯಕ್ಷೇತ್ರ ಹೊನ್ನಾವರ ತಾಲೂಕು. ಇವರು ನಾಮಧಾರಿಗಳು ರಚಿಸಿದ ಕಾವ್ಯಗಳೆಂದರೆ ತಿರುಪತಿ ವೆಂಕಟೇಶ ಮಹಾತ್ಮೆ ಮತ್ತು ನಾಮಧಾರಿ ಜಾತಿಯ ಚರಿತ್ರೆ. ಭೋಗ ಷಟ್ಪದಿಯಲ್ಲಿ ಬರೆದ ಈ ನಾಮಧಾರಿ ಜಾತಿಯ ಚರಿತ್ರೆಯ ಒಂದು ಪದ್ಯ ಈ ಕೆಳಗಿನಂತಿದೆ.

ನಾಯಕನಿವ ಸಕಲ ಪಡೆಗೆ
ನಾಯಕನಿವ ಸಕಲ ಧನಕೆ
ನಾಯಕನಿವ ಸಕಲ ಪುಣ್ಯ ಕಾರ್ಯ ವೃಂದಕೆ
ನಾಯಕನಿವ ಸಕಲ ಕಲೆಗೆ
ನಾಯಕನಿವ ವಿಬುಧ ಜನಕೆ
ನಾಯಕನಿವ ದಾತೃ ಜನರ ಘನದ ಸಂಘಕೆ

ಕುಮಟಾ ತಾಲೂಕಿನ ಕಡೇಕೋಡಿ ಗ್ರಾಮದವರಾದ ವೆಂಕಪ್ಪ ಪರಮಯ್ಯ ಹೆಗಡೆಯವರು ಶೀಘ್ರ ಕವಿಗಳು. ಅನುವಾದ ಕೃತಿಗಳೂ, ಪರಿಷ್ಕೃತ ಕೃತಿಗಳೂ, ಸ್ವತಂತ್ರ ಕೃತಿಗಳೂ ಇವೆ. ಈ ಅವಧಿಯಲ್ಲಿ ಜೈನ ಸಂಪ್ರದಾಯ, ವೈಷ್ಣವ ಸಂಪ್ರದಾಯ, ಮಧ್ವ ಸಂಪ್ರದಾಯಗಳು ಜನರಮೇಲೆ ಪ್ರಭಾವ ಬೀರಿದ್ದರಿಂದ ಇಲ್ಲಿಯ ಸನ್ಯಾಸಿಗಳು ಸಾಧುಪುರುಷರು ಆ ಸಂಪ್ರದಾಯಕ್ಕೆ ತಕ್ಕಂತೆಯೂ ಕಾವ್ಯಗಳನ್ನು ರಚಿಸಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಕವಿಗಳೆಂದು ಕಾವ್ಯದಿಂದ ಗುರುತಿಸಲು ಸಾಧ್ಯವಾದರೂ ಅನಾಮಧೇಯವಾಗಿಯೇ ಕೆಲವು ಕೃತಿಗಳಿವೆ.ಜೈನರು, ಬ್ರಾಹ್ಮಣರು, ಗೌಡ ಸಾರಸ್ವತ ಬ್ರಾಹ್ಮಣರು, ಸಾರಸ್ವತರು ಕಾವ್ಯವನ್ನು ಬರೆದಿದ್ದಾರೆ ಕವಯಿತ್ರಿಯರು ಸಹ ಬೆಳಕಿಗೆಬಂದು ಸಾಹಿತ್ಯಕ್ಕೆ ಅಳಿಲ ಸೇವೆಯನ್ನು ಸಲ್ಲಿಸಿದ್ದಾರೆ. ಚಂಪು, ಷಟ್ಪದಿ. ಕಂದ, ಸಾಂಗತ್ಯ, ವಚನ, ಕೀರ್ತನೆಗಳು, ಗೀತೆಗಳು ಆರತಿ ಪದಗಳು, ಸ್ತೋತ್ರಗಳು. ಶ್ಲೋಕಗಳು ಬರೆದಿದ್ದಲ್ಲದೆ ವೇದಗಳ ಅನುವಾದ, ಆಧ್ಯಾತ್ಮಿಕಕ್ಕೆ ಸಂಬಂಧಪಟ್ಟ ವಿಷಯಗಳ ಮೇಲೂ ಲೇಖನಗಳನ್ನು ಬರೆದಿದ್ದಾರೆ. ಸಂಸ್ಕೃತದಲ್ಲೂ ಕಾವ್ಯಗಳ ಅನುವಾದವನ್ನು ಸಹ ಮನ ಮುಟ್ಟುವಂತೆ ಮಾಡಿದ್ದಾರೆ. ಪದ್ಯ ಸಾಹಿತ್ಯವೇ ಈ ಅವಧಿಯಲ್ಲಿ ರಚಿತವಾದದ್ದು ಹೆಚ್ಚು.

ಇತ್ತೀಚಿನ ಸಾಹಿತ್ಯ

ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾಹಿತ್ಯ ಅವ್ಯಾಹತವಾಗಿ ನಡೆದು ಬಂದಿದೆ. ಹಿಂದಿನ ಕವಿಗಳು ಛಂದಸ್ಸಿನಲ್ಲೇ ಕನ್ನಡ ಕಾವ್ಯ ಬರೆದರು. ಸಂಗೀತಮಯವಾದ ಸಾಂಗತ್ಯ ಹಾಗೂ ಷಟ್ಪದಿಗಳನ್ನು ಉಪಯೋಗಿಸಿಕೊಂಡಿದ್ದಾರೆ. ದೇಸಿಯಲ್ಲಿಯೇ ಕಾವ್ಯ ಬರೆದು ಜನರ ಒಲವಿಗೆ ಪಾತ್ರರಾಗಿದ್ದಾರೆ. ಇಂಗ್ಲೀಷ ಸಾಹಿತ್ಯದ ಪ್ರಭಾವ ಕನ್ನಡದ ಮೇಲೆ ಪರಿಣಾಮ ಬೀರಿದಾಗ ಕಾವ್ಯವಾಹಿನಿ ಹೊಸ ಹಾದಿಯಲ್ಲಿ ಹೆಜ್ಜೆಯಿಟ್ಟಿತು. ಇತ್ತೀಚಿನ ಸಾಹಿತ್ಯವನ್ನು ಪದ್ಯ, ಕಾದಂಬರಿ, ಕಥೆ, ನಾಟಕ, ಪ್ರವಾಸ ಸಾಹಿತ್ಯ. ವಿಚಾರ ಸಾಹಿತ್ಯ, ಪತ್ರಿಕಾ ಸಾಹಿತ್ಯವೆಂದು ವಿಭಾಗಿಸ ಬಹುದು.

ಪದ್ಯ ಸಾಹಿತ್ಯ

ದಿವಂಗತ ದಿನಕರ ದೇಸಾಯಿಯವರು ಬರೆದ ಚುಟುಕು ಗಳು ಕನ್ನಡ ಸಾಹಿತ್ಯದಲ್ಲಿಯೇ ಜನಪ್ರಿಯವಾಗಿವೆ. 'ಚುಟುಕು ಗಳ ಬ್ರಹ್ಮ' ಎಂದು ಇವರನ್ನು ಕರೆಯಬಹುದು. ಇವರು ಜನತಾ ಕವಿ. ಇವರ ಚುಟುಕುಗಳಲ್ಲಿಯ ವಿಡಂಬನೆ ಅಸಾಧಾರಣ ವಾದದ್ದು: ವಕ್ರೋಕ್ತಿಯ ತೀಕ್ಷ್ಣತೆ ಮತ್ತು ಚಾತುರ್ಯ ಯಶಸ್ವಿಯೆನಿಸುತ್ತದೆ. ಇವರ ಕವನ ಸಂಗ್ರಹಗಳೆಂದರೆ 'ಮಕ್ಕಳ ಪದಗಳು', 'ಹೂ ಗೊಂಚಲು', ದಿನಕರನ ಚೌಪದಿ'. ಹತ್ತು ಸಾವಿರಕ್ಕಿಂತ ಹೆಚ್ಚು ಚುಟುಕುಗಳನ್ನು ಬರೆದಿದ್ದಾರೆ.

ಮಕ್ಕಳ ಪದಗಳಿಗೆ ಮುಂಬಯಿ ಸರಕಾರದಿಂದ ಬಹುಮಾನ ಸಿಕ್ಕಿದೆ. ಗೋಕಾಕರು ಗುರುತಿಸುವಂತೆ ಭಾವನಿರ್ಭರತೆ, ನೇರತೆ, ಸಹಜಾಭಿವ್ಯಕ್ತಿ ಇವು ಇಲ್ಲಿಯ ಕಾವ್ಯ ಲಕ್ಷಣಗಳು. ಇವರ ಕವಿತೆಗಳಲ್ಲಿ ಜೀವಂತಿಕೆಯಿದೆ ಸಹಜತೆಯಿದೆ. ಚುಟುಕುಗಳನ್ನು ದೇಸಾಯಿಯವರ ಲೋಕಾನುಭವ ಗೀತೆಗಳು ಎನ್ನಲಾಗಿದೆ. ಸರ್ವಜ್ಞನ ತ್ರಿಪದಿಗಳಂತೆ, "ಮಂಕುತಿಮ್ಮನ ಕಗ್ಗ"ದಂತೆ ಚುಟುಕಿನ ಚಾಟಿಗೆ ಸಿಗದ ಸಂಗತಿ ಬಹಳ ವಿರಳ. ತಾನು ಬರೆದ ಚುಟುಕುಗಳ ಸಂಖ್ಯೆ ವಿಪರೀತವಾದರೂ ಶೇಕಡಾ ತೊಂಬತ್ತು ಗೋತಾ ಹೊಡೆದು ಏಳೆಂಟು ಸತ್ತು ಒಂದೆರಡು ಬದುಕಿದರೆ ಅವು ಮಾತ್ರ ಮುತ್ತು ಎಂದು ಹೇಳಿದ್ದಾರೆ. ಶ್ರೀ ಜಿ. ಎಸ್. ಶಿವರುದ್ರಪ್ಪನವರು ದೇಸಾಯಿಯವರ ಚುಟುಕಗಳ ಮೇಲೆ ಬರೆಯುತ್ತಾ "ಶ್ರೀ ದಿನಕರ ದೇಸಾಯಿಯವರ ಚುಟುಕುಗಳು ಯಾರ ಕಣ್ಣನ್ನಾದರೂ ಸೆಳೆಯುತ್ತಿವೆ. ಭಾಷೆಯ ಹದ, ಮಾತಿನ ಮೊನಚು, ಧ್ವನಿಯ ಕೊಂಕು ಅವುಗಳಲ್ಲಿ ಅಪಾರವಾಗಿದೆ." ಎಂದು ಹೇಳಿದ್ದಾರೆ. ಶ್ರೀ ವಿ. ಕೃ. ಗೋಕಾಕರು "ಕನ್ನಡಕ್ಕೆ ಇಂದಿಗೂ ಒಬ್ಬನೇ ದಿನಕರನೆಂದು ಹೇಳದೆ ಗತಿ ಇಲ್ಲ ಎಂದು ಪ್ರಕಟಪಡಿಸಿದ್ದಾರೆ.

ಶ್ರೀ ಬಿ. ಎಚ್. ಶ್ರೀಧರರ ಕಾವ್ಯಮಾರ್ಗವೇ ವಿಶಿಷ್ಟ ಬಗೆಯದು. 'ಮೇಘನಾದ', 'ಅಮೃತಬಿಂದು', 'ಕಿನ್ನರಗೀತ', 'ಮುತ್ತುರತ್ನ', 'ಮಂಜುಗೀತ', ರಸಯಜ್ಞಗಳು ಇವರ ಕವನ ಸಂಕಲನಗಳು. ಇವರ ಕವನಗಳಲ್ಲಿ "ಅಪಾರ ಪಾಂಡಿತ್ಯದ ರಸಗಟ್ಟಿ. ಶೈಲಿ ಸಕ್ಕದ ಕನ್ನಡಗಳ ಜಕ್ಕುಲಿಸುವ ಜವ್ವನದ ಶಕ್ತಿ

ಯಿಂದೊಡಗೂಡಿರುತ್ತದೆ. ತಮಗಾದ ಸೌಂದರ್ಯಾನುಭವವನ್ನು ಭಕ್ತಿಯ ಭಾವವನ್ನು ಆನಂದೋತ್ಸಾಹವನ್ನು ಮಾತ್ರವೇ ಅಲ್ಲದೆ ಬಗೆ ಬಗೆಯ ಪಾತ್ರಗಳು ಪಡುವ ಅನೇಕ ಬಗೆಯ ಅನುಭವವೇನೆಂಬುದನ್ನು ಸೂಕ್ಷ್ಮವಾಗಿ ಬಿಡಿಸಿದ್ದಾರೆ ಶ್ರೀಧರರು. "ಏನನ್ನೂ ಪ್ರಚಂಡವಾಗಿ ಬರೆಯಬಲ್ಲ ನಮ್ಮ ಜಿಲ್ಲೆಯ ಪ್ರತಿಬೇಂದ್ರೆಯೋ ಎನಿಸುವ ರಸಯಜ್ಞ ದೀಕ್ಷಿತ"ರೆಂದು ಗೌರೀಶ ಕಾಯ್ಕಿಣಿಯವರು ಅಭಿಪ್ರಾಯ ಪಟ್ಟಿದ್ದಾರೆ.

'ಸಂತಾನ', 'ಹಾವಾಡಿಗರ ಹುಡುಗ', 'ಪ್ರತಿಬಿಂಬಗಳು' 'ಬೆಳ್ಳಕ್ಕಿಗಳು', 'ಮತ್ಸ್ಯಗಂಧಿ'. ಕೃತಿಗಳನ್ನು ರಚಿಸಿದ ಶ್ರೀ ಎಸ್. ಆರ್. ಎಕ್ಕುಂಡಿ ಅವರ ಲಾಲಿತ್ಯ ಪೂರ್ಣ ಬರವಣಿಗೆಗೆ ಮರುಳಾಗದವರಿಲ್ಲ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅತ್ಯಂತ ಗಮನಾರ್ಹವಾದ ಕವಿಯಾಗಿದ್ದಾರೆ. ನವ್ಯ ಕಾವ್ಯದೊಡನೆ ಸೇರಿಯೂ ಸೇರದಂತೆ ಹರಿವ ಅವರ ಕಾವ್ಯ ತನ್ನದೇ ಆದ ವಿಶಿಷ್ಟತೆಯನ್ನು ರಕ್ಷಿಸಿಕೊಂಡು ಬಂದಿದೆ. "ಪುರಾಣ ಕಲ್ಪನೆ ಮುನ್ನಿನ ವಾಸನೆಗಳಲ್ಲಿ ಅವರು ಇಹದ ವಾಸ್ತವವನ್ನು ಕಡೆಗಣಿಸಿದವರಲ್ಲ" ಎಂದು ಹಾ.ಮಾ. ನಾಯಕರು ಹೇಳಿದ್ದಾರೆ. ಇವರು ತಮ್ಮ ಕಾವ್ಯದಲ್ಲಿ ಬುದ್ಧಿ ಶಕ್ತಿಗಿಂತ ಮಿಗಿಲಾಗಿ ಹೃದಯಕ್ಕೆ, ಅಂತಃಕರಣಕ್ಕೆ ಮಹತ್ವವನ್ನು ನೀಡಿ ತಮ್ಮ ಜೀವನಾನುಭವದ ರಸಾನುಭವವನ್ನು ರಸಿಕರ ಅಂತಃಕರಣ ತಟ್ಟುವಂತೆ ಬರೆದಿದ್ದಾರೆ. ಇವರು ನಾದಲೋಲ ಕವಿಗಳು. ಕಥನಕವನಗಳನ್ನು ಬರೆಯುವದರಲ್ಲಿ ಕನ್ನಡ ಕಾವ್ಯ ಪ್ರಪಂಚದಲ್ಲಿ ಇವರದು ಎತ್ತಿದ ಕೈ. ಸಾಹಿತ್ಯ ಅಕೆಡೆಮಿ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

ಶ್ರೀ ಗೌರೀಶ ಕಾಯ್ಕಿಣಿಯವರು ಜಿಲ್ಲೆಯ ಕಾವ್ಯ ಪ್ರಪಂಚದಲ್ಲಿ ಮಹತ್ವದ ಸ್ಥಾನ ಗಳಿಸಿದವರಾಗಿದ್ದು ಅನೇಕ ಕವನಗಳನ್ನು ಗೀತರೂಪಕಗಳನ್ನು ರಚಿಸಿದ್ದಾರೆ. ಚೈತ್ರಚಿತ್ರ, ರಂಗಪಂಚಮಿ, ಕಾಮದಹನ, ಕ್ರೌಂಚ ಧ್ವನಿ, ವರ್ಷಾಗಮನ, ಮತ್ತು ಯಶೋಧರಾ ಈ ಆರು ಗೀತರೂಪಕಗಳು. ಈ ರೂಪಕಗಳು ಭಾವುಕತೆಯಿಂದಲೂ ಕವಿಯ ರಸಾರ್ದ್ರತೆಯಿಂದಲೂ ಮೈದುಂಬಿವೆ. ವಸ್ತುವಿನಲ್ಲಿ ತತ್ವವಿದೆ. ರಚನೆಯಲ್ಲಿ ರಮ್ಯತೆಯಿದೆ, ನಿರ್ವಹಣೆಯಲ್ಲಿ ಚಾತುರ್ಯವಿದೆ.

ಜಿ. ಆರ್. ಪಾಂಡೇಶ್ವರರ 'ಸುಪಂಥಾ' ಚೆಂಗಲವೆ. ಕವನ ಸಂಕಲನಗಳು ಅನೇಕ ಗೀತರೂಪಕಗಳು ರಸಿಕರ ಮನ ಸೆಳೆದಿವೆ. "ಬೆಳಕಿನ ಬೀಜ"ವೆಂದು ಪ್ರಸಿದ್ಧರಾಗಿದ್ದಾರೆ. ಇವರ ಕಾವ್ಯಗಳು ಸೌಂದರ್ಯದ ರಸಪಾಕ. ಅವರ ಕಾವ್ಯಧಾರೆ ಅವರನ್ನು ಹಿಂದಿನ ಉತ್ತರ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿತು.

ವಿ. ಜಿ. ಭಟ್ಟರು ನಾಡಿನ ಕಾವ್ಯ ಕ್ಷೇತ್ರದ ಮಹತ್ವದ ವಿಡಂಬನ ಕವಿಗಳು. ಜೀವನದಲ್ಲಿಯ ಯಾವ ಅಂಶವೂ ಇವರ ಕಣ್ಣು ತಪ್ಪಿಸಿಕೊಳ್ಳಲಿಲ್ಲಾ 'ಕಿಷ್ಕಿಂಧೆ', 'ಅರಣ್ಯರೋಧನ', 'ಕಾವ್ಯವೇದನೆ', 'ಆತ್ಮಶೋಧನೆ', "ರಕ್ತಾಂಜಲಿ" ಇವರ ಪ್ರಮುಖ ಕೃತಿಗಳು.

ಗಂಗಾಧರ ಚಿತ್ತಾಲ ಅತ್ಯಂತ ಮೇಧಾವಿ ಕವಿ. ಉಜ್ವಲ ಪ್ರತಿಭೆಯ ಪ್ರಭೆಯನ್ನು ಪರಿಣಾಮಕಾರಿಯಾಗಿ ತಮ್ಮ ಕಾವ್ಯದಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ಚಿತ್ತಾಲರ ಕಾವ್ಯಶೀಲ ಶಕ್ತಿ

ಯುತವಾದದ್ದು. ತಮ್ಮದೇ ಆದ ಕಾವ್ಯ ಶೈಲಿಯನ್ನು ಸಾಧಿಸಿ ಕೊಂಡಿದ್ದಾರೆ. "ತಮ್ಮ ಒಲವಿನಿಂದ ಮಾನವತಾವಾದಿಗಳು... ......ಸಾಮಾಜಿಕ ಪ್ರಜ್ಞೆ ಇಲ್ಲಿ ಸಾಕಷ್ಟಿದ್ದರೂ ಅದು ಸೌಂದರ್ಯ ದೃಷ್ಟಿಗೆ ಆಧೀನವಾಗಿ ಕೆಲಸ ಮಾಡುತ್ತಿದೆ....... ......ಬಳಕೆ ಕನ್ನಡದಲ್ಲಿ ಬರೆದರೂ ಶಬ್ದಗಳನ್ನು ಇವರು ದ್ರಾಕ್ಷಿಗಳಂತೆ ಸವಿಯು ಬಲ್ಲರು..............ಮಿಡಿಯುತ್ತಿರುವ ಒಂದು ಸೂಕ್ಷ್ಮ ಜೀವನವನ್ನು ಎತ್ತುವಂತೆ ಇವರು ಶಬ್ದ ಗಳನ್ನು ಎತ್ತುತ್ತಾರೆ.............ಅನುಭವ ನಿರೂಪಣೆಯಲ್ಲಿ ಚಿತ್ತಾಲರು ಪ್ರಾಮಾಣಿಕತೆ, ಉತ್ಕಟತೆ, ಹಾಗೂ ವಿವರ ಪೂರ್ಣತೆಯನ್ನು ಕೂಡಿಯೇ ಸಾಧಿಸಿದ್ದಾರೆ. ಈ ತೇಜಃಪುಂಜ ನೇತ್ರ ಎಲ್ಲ ಲೋಕಗಳನ್ನು ಈಕ್ಷಿಸಲಿ, ಲೆಕ್ಕಣಿಕೆ ಆ ದರ್ಶನದ ಸೌಭಾಗ್ಯವನ್ನು ಕನ್ನಡಿಗರಿಗೆ ಧಾರೆಯೆರೆದು ಸಂತೃಪ್ತವಾಗಲಿ" ಎಂದು ಪ್ರಸಿದ್ಧ ಸಾಹಿತಿಗಳಾದ ಶ್ರೀಯುತ ಗೋಕಾಕರೇ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಇವರಿಗೂ ಸಹ ಸಾಹಿತ್ಯ ಅಕೆಡೆಮಿ ಪ್ರಶಸ್ತಿ ದೊರಕಿದೆ.

ಶ್ರೀ ಎಂ. ಅಕಬರ ಅಲಿ ಅವರ 'ವಿಟಸಿಂಧು' 'ನವ ಚೇತನ' 'ಸುಮನ ಸೌರಭ', 'ಗಂಧ ಕೇಶರ' ಕೃತಿ ಮೆಚ್ಚುಗೆ ಯನ್ನು ಪಡೆದಿವೆ. ಅಲಿಯವರಿಗೆ ಕವಿಯ ಸಹೃದಯತೆ ಇದೆ. ಬುದ್ಧಿವಂತಿಕೆಯ ನಿರೀಕ್ಷಣಾ ಶಕ್ತಿಯಿದೆ. ಆತ್ಮ ಶೋಧನೆಯ ಪ್ರಾಮಾಣಿಕ ಧೈರ್ಯವಿದೆ. ಎಂದು ಶ್ರೀರಂಗರು ಹೇಳಿದ್ದಾರೆ. ಸುತ್ತ ಇರುವ ಸಮಾಜದ ಡೊಂಕು ಕೊಂಕುಗಳ ಬಾಹಿರ ಕಾರ್ಯಗಳ ಅವ್ಯಕ್ತ ಸ್ವರೂಪ ಹೆಣೆಯಲ್ಪಟ್ಟಿದೆ. ನವ್ಯ ಕವಿ ಗಳೂ ಈ ಕ್ರಮ ಅನುಸರಿಸಿದಲ್ಲಿ ಕಾವ್ಯ ಜನಪ್ರಿಯತೆ ಕಾಣುವುದು.

ಜಿ. ಕೆ. ಹೆಗಡೆಯವರು ಸಂವೇದನಾಶೀಲರು ಹೇಗೋ ಸಂಯಮ ಶೀಲಕವಿಗಳೂ ಹೌದು. ನಿಸರ್ಗದ ಸವಿರತೆಯನ್ನು ಪ್ರೇಮದ ಕೋಮಲತೆಯನ್ನು ರಾಷ್ಟ್ರೀಯ ಪ್ರಚೋದನೆಯನ್ನು ಶ್ರೀಯುತರು ಎಳೆ ಎಳೆಯಾಗಿ ಬಿಡಿಸಬಲ್ಲರು.

ಪಂಡಿತ ವಿಘ್ನೇಶ್ವರ ಶರ್ಮಾರವರು "ದೇವಿ ರೇಣುಕೆ" 'ದೇವಯಾನಿ' ಕವನ ಸಂಗ್ರಹಗಳನ್ನು ಬರೆದಿದ್ದಾರೆ. ಪ್ರೀತಿ ತತ್ವದ ಹಿರಿಮೆಯು ಇಲ್ಲಿ ಉದ್ದಕ್ಕೂ ಚಾಚಿದೆ. ಖ್ಯಾತ ಸಂಸ್ಕೃತ-ಕನ್ನಡ ಉಭಯಭಾಷಾ ವರ ಕವಿಗಳಾಗಿದ್ದಾರೆ.

ಅರವಿಂದ ನಾಡಕರ್ಣಿ ಅವರ 'ಕಾವ್ಯಾರ್ಪಣ' 'ಮಾಯಾವಿ' 'ಜರಾಸಂಧ' 'ನಾ ಭಾರತೀ ಕುಮಾರ' ಸಂಗ್ರಹ ಗಳೂ ರಮ್ಯ ಕವನಗಳಾಗಿ ಪ್ರಾಸಯುಕ್ತ ವರ್ಣನೆಗಳಾಗಿ, ನವ ಪ್ರಜ್ಞೆಯ ಕವನಗಳಾಗಿವೆ. ಅಲ್ಲಲ್ಲಿ ವಿಡಂಬನೆ ಪ್ರಚೋದಿಸುವ ಮಾದರಿ ಮನೋಹರವಾಗಿದೆ.

'ಬಾಳದೀಪಾವಳಿ' ಡಾ. ಎಲ್. ಆರ್. ಹೆಗಡೆಯವರ ಕವನ ಸಂಗ್ರಹ. ಒಂದೊಂದು ಕವನ ದೀಪವೂ ಬಾಳಿನ ಕತ್ತಲೆಯ ಮೇಲೆ ಬಣ್ಣದ ಬೆಳಕನ್ನು ಚೆಲ್ಲುತ್ತದೆ. ಎಂದು ಮುನ್ನುಡಿಯಲ್ಲಿ ಬೇಂದ್ರೆಯವರು ಹೇಳಿದ್ದಾರೆ.

ಸ.ಪ. ಗಾಂವಕರ ಅವರ 'ಮುಗಿಲು', 'ಪ್ರಕೃತಿ–ಪ್ರೀತಿ' 'ಪ್ರೇರಣೆ-ಶೋಧನೆ', 'ಗೀತಾಂಜಲಿ'(ಅನುವಾದ) ಕವನ ಸಂಗ್ರ ಹಗಳು ಪ್ರಕಟವಾಗಿವೆ. 'ಪ್ರಕೃತಿ–ಪ್ರೀತಿಗೆ' ಮುನ್ನುಡಿ ಬರೆ ಯುತ್ತಾ ಬೇಂದ್ರೆಯವರು ಈ ರೀತಿ ತಮ್ಮ ಅಭಿಪ್ರಾಯ ವ್ಯಕ್ತ

ಪಡಿಸಿದ್ದಾರೆ. ಈ ಕವನಗಳಲ್ಲಿ ಸಹಜ ಕಾವ್ಯ ಇದೆ. ಸೌಂದರ್ಯ ದೃಷ್ಟಿ ಎರವಲು ತರಬೇಕಾಗಿಲ್ಲ. ಸುಖದುಃಖಕ್ಕಂತೂ ಕೊರತೆಯೇ ಇಲ್ಲ; ಅವರು ಒಂದಕ್ಕೆ ಬಾಗಿಲು ತೆರೆದು ಇನ್ನೊಂದಕ್ಕೆ ಮುಚ್ಚಿರಲಿಲ್ಲ. ಎರಡನ್ನೂ ಅನುಭವ ಎಂದು ರುಚಿ ನೋಡುವ ಹದ ಅವರಿಗೆ ಹವಣಾಗಿ ಕೈಗೂಡಿತ್ತು.

ಸುಂದರ ನಾಡಕರ್ಣಿಯವರು ವಿಶಿಷ್ಟ ಅನುಭವಗಳಿಗೆ ಅಭಿವ್ಯಕ್ತಿ ನೀಡಿದ್ದಾರೆ. "ಹಸಿರು ದೀಪ"ವೆಂಬ ಹೆಸರು ಕುತೂಹಲಕಾರಿಯಾಗಿದೆ. ಕವಿಯಲ್ಲಿ ಅನುಭವ ಸ್ಪಷ್ಟತೆಯಿದೆ. ಸುಂದರ ಅನನ್ಯ ಕಾವ್ಯ ಪ್ರತಿಮೆಗಳಿವೆ. ಅನೇಕ ಉತ್ತಮ ಕವನಗಳನ್ನು ಅನುವಾದ ಮಾಡಿ ಕನ್ನಡ ಕಾವ್ಯವನ್ನು ಶ್ರೀಮಂತಗೊಳಿಸಿದ್ದಾರೆ.

ಜಯಂತ ಕಾಯ್ಕಿಣಿಯವರು ನಾಡಿನ ಮಹತ್ವದ ಕಿರಿಯ ಕವಿಗಳಲ್ಲಿ ಹಿರಿಯ ಕವಿಗಳಾಗಿದ್ದಾರೆ. ಇವರ ಕಾವ್ಯ ಪ್ರತಿಭೆ ವಿವಿಧ ಅನಿಸಿಕೆಗಳನ್ನು ನಿಸ್ಸಂಕೋಚವಾಗಿ, ಆಪ್ತವಾಗಿ, ಹುಪವಾಗಿ ಒಡಮೂಡಿಸಿದೆ. 'ರಂಗದಿಂದ ವಂದಿಷ್ಟುದೂರ, ಕೋಟಿತೀರ್ಥ, ಕವನ ಸಂಗ್ರಹಗಳು ಕನ್ನಡದ ಶ್ರೇಷ್ಠ ವಿಮರ್ಶಕರ ಮೆಚ್ಚುಗೆ ಗಳಿಸಿವೆ. "ರಂಗದಿಂದ ವಂದಿಷ್ಟು ದೂರ" ಕವನ ಸಂಗ್ರಹಕ್ಕೆ ಸಾಹಿತ್ಯ ಅಕೆಡೆಮಿಯ ಪ್ರಶಸ್ತಿ ದೊರಕಿದೆ.

ಜಿ. ಎಸ್. ಅವಧಾನಿಯವರು 'ಬೆಂಕಿ ಬಳ್ಳಿ,' 'ಹೊಕ್ಕಳು' ಕಾವ್ಯ ಸಂಕಲನಗಳನ್ನು ಬರೆದಿದ್ದಾರೆ. ನಮ್ಮ ಜಿಲ್ಲೆಯ ಯುವಕರ ತಲೆಮಾರಿನ ತುಂಬ ಪ್ರತಿಭಾಶಾಲಿ ಕವಿ

ಗಳಲ್ಲಿ ಇವರೊಬ್ಬರು. ಅಡಿಗರು ನಿಜವಾದಕವಿತ್ವಶಕ್ತಿ ಕವಿಯಲ್ಲಿ ಸಂಚಾರವಾಗುತ್ತಿದೆ ಎಂದು ಹೇಳಿದ್ದಾರೆ.

ಎಲ್. ಎಸ್. ಶಾಸ್ತ್ರಿಯವರ 'ಸ್ಮೃತಿ' ಸಂಗ್ರಹ ಕಥನ ಕವನಗಳ ಕಿರುಕಾಣ್ಕೆ. ಈ ಸಂಕಲನದ ಕೆಲವು ಕವನಗಳು ಹೃದ್ಯವಾಗಿವೆ.

'ಶರಾವತಿ' ಕಾವ್ಯ ಸಂಕಲನ ನಾರಾಯಣ ಕಾಗಾಲರ ಕಾವ್ಯ ಪ್ರತಿಭೆಗೆ, ನವ್ಯಧ್ವನಿಗೆ ಸಾಕ್ಷಿಯಾಗಿದೆ. ಲಯ, ದಾಟಿ ನೂತನತೆಯನ್ನು ತೋರಿದ್ದಾರೆ.

ವಿಷ್ಣು ನಾಯ್ಕರ 'ಸುಮನ' ಕವನ ಸಂಕಲದಲ್ಲಿ ಬದುಕಿನ ಹಲವು ಅನುಭವಗಳ ಹಿನ್ನೆಲೆಯಲ್ಲಿ ಜೀವನ ಮೌಲ್ಯಗಳ ವಿಶ್ಲೇಷಣೆ ಹವಣಾಗಿ ಹರಿದಿದೆ. ನಾಡು-ನುಡಿಯ ಪ್ರೇಮ, ಆದರ್ಶದ ಅನ್ವೇಷಣೆ, ಹಿರಿಯರ ಕುರಿತು ಗೌರವಾದಾರ ಸುಮನದ ಉದ್ದಕ್ಕು ಸೂರೆಯಾಗಿವೆ. 'ಪರಿಮಳ' ಕಾವ್ಯ ಸಂಕಲನದಲ್ಲಿ ಆಧ್ಯಾತ್ಮಿಕ ಹಂಬಲ ಹಣ್ಣಾಗಿದೆ. ಮಂತ್ರಾಲಯದ ಪ್ರಭುವಿನ ಗುಣಗಾನ 'ಪರಿಮಳದ' ಆರಾಧನೆ ವಿಭಾಗದಲ್ಲಿದೆ. ಭಕ್ತಿ ಶ್ರದ್ಧೆ ಕಿಂಕರತ್ವ ಇಲ್ಲಿ ಹಾಸು ಹೊಕ್ಕಾಗಿವೆ. 'ಆ ರತಿ ಈ ರೀತಿ' ಕವನ ಸಂಗ್ರಹದಲ್ಲಿ ಕವಿಯ ಕಾವ್ಯ ಕ್ಷಿತಿಜ ವಿಸ್ತಾರಗೊಂಡಿದೆ. ವ್ಯಂಗ್ಯ ಪ್ರತೀಕಗಳ ಒಂದು ಹೊಸತನ ಇವರಲ್ಲಿ ಕಂಡು ಬರುತ್ತದೆ.

ಶ್ರೀ ರೋಹಿದಾಸ ಭಂಡಾರಿ ಅವರ 'ಕಣ್ಣೇ ಕಟ್ಟೆ ಕಾಡೇ ಗೂಡೆ' ಕವನ ಸಂಕಲನ ತನ್ನ ಸಂಕೀರ್ಣ ಸತ್ವದಿಂದ ತಲೆಯೆತ್ತಿ ನಿಲ್ಲುವ ಕೃತಿ. ಸಮಗ್ರ ಜೀವನವನ್ನೇ ಕಣ್ಣು ಮುಚ್ಚಾಲೆಯಾಗಿ

ನೋಡುವಯತ್ನ 'ಕಣ್ಣೇ ಕಟ್ಟೆ ಕಾಡೆ' ಗೂಡೆ ಕವನದಲ್ಲಿದೆ. ಬದುಕಿನ ಪೊಳ್ಳುತನ ಆದರ್ಶದ ಅನ್ವೇಷಣೆ ಸಾವಿನ ಸರಸ ದಲಿತರ ಧ್ವನಿಈ ಸಂಕಲನಕ್ಕೆ ವೈವಿಧ್ಯದ ಮೆರುಗು ಕೊಟ್ಟಿವೆ.

ಕಾಡ ಹೆಣ್ಣು' ಶ್ರೀ ಶಾಂತಾರಾಮ ಹಿಚ್ಕಡ ಅವರ ಚೊಚ್ಚಲು ಕೃತಿ, ಸ್ನೇಹ ಪ್ರಣಯ ಪ್ರಕೃತಿ ಪ್ರೇಮ, ಸ್ವಾತಂತ್ರ್ಯದ ಕೆಚ್ಚು ಔದ್ಯೋಗೀಕರಣ—ಇಂಥ ಹಲವು ಇಲ್ಲಿ ಕವನ ವಸ್ತುಗಳಾಗಿವೆ.

ಗೋಪಾಲ ಕೃಷ್ಣ ಹೆಗಡೆಯವರ 'ವೈಜಯಂತಿ', 'ಚೈತ್ರ' ವಿಡಂಬಾರಿಯವರ ಚುಟುಕುಗಳು ಜನಮೆಚ್ಚಿಗೆ ಗಳಿಸಿವೆ. ವಿಡಂಬಾರಿ ಅವರ 'ಒಗ್ಗರಣೆ' ಗಮನಾರ್ಹ ಕೃತಿಯೆನ್ನಿಸಿಕೊಂಡಿದೆ. ಶ್ರೀ ಮಾಳಕೋಡ ನಾರಾಯಣರ 'ಹೂವು', 'ಮುಗಿಲದೀಪ' ಕವನ ಸಂಕಲನಗಳು ಉತ್ತಮವಾಗಿವೆ. ಅವುಗಳಲ್ಲಿ ಕವಿ ಕಲ್ಪನೆಯ ಕಿಡಿ ಮಿಂಚನ್ನು ಕಾಣಬಹುದು. ಕವನಗಳು ಸಣ್ಣವಾದರೂ ಅವುಗಳ ಕಾಂತಿ ಮತ್ತು ಮಾರ್ದವವು ಮನಸ್ಸನ್ನು ಸೂರೆಗೊಳ್ಳುತ್ತವೆ. ಶ್ರೀ ದಿವಸ್ಪತಿ ಹೆಗಡೆಯವರ 'ನನ್ನ ನೆನಹುಗಳು' ಸರಳ ಸುಲಭ ಶೈಲಿಯಲ್ಲಿರುವ ಕವನ ಸಂಕಲನವಾಗಿದೆ. ಶ್ರೀ ಹೊನ್ನಪ್ಪ ಭಾವೀಕೇರಿಯವರ 'ಕೇದಿಗೆ' ಕವನ ಸಂಕಲನ ಜಾನಪದ ಜೀವನಕ್ಕೆ ಮತ್ತು ಸಾಮಾಜಿಕ ಜೀವನಕ್ಕೆ ಹೊಂದಿದವುಗಳಾಗಿವೆ. ಶ್ರೀ ವಿ. ವಿ. ತೊರ್ಕೆಯವರ 'ಕವಿತಾ ಕಲಾಪ', 'ಸುಮಾಂಜಲಿ' ಪದ್ಯಗಳ ಸಂಕಲನಗಳು ಸರಳವಾಗಿ ಸುಲಭ ಶೈಲಿಯಲ್ಲಿದ್ದು ಕೆಲವು ಪದ್ಯಗಳು ಚೆನ್ನಾಗಿವೆ.

ಹೊಲಿ ಶೇಖರರು ಬರೆದ ಕಾದಂಬರಿ ೧) ಕದಡಿದ ಕೆರೆ ೨) ಗುದಮುರುಗಿ.

ದಯಾನಂದ ತೊರ್ಕೆಯವರ ಕೃತಿಗಳು ೧) ವಿಮುಕ್ತಿ ೨) ಗೆಜ್ಜೆನಾದ ೩) ಬಂಧನ ೪) ಕಲಾನಿಧಿ ೫) ವರ್ತುಲ. ಜೀವನದಲ್ಲಿ ಹಾದಿತಪ್ಪಿದ ಇಬ್ಬರು ಹೆಣ್ಣುಗಳ ಜೀವನವನ್ನು ಆಧರಿಸಿ "ವಿಮುಕ್ತಿ" ಬರೆದರೆ "ಗೆಜ್ಜೆನಾದ" ಪ್ರಣಯಿಗಳು ಒಂದು ಗೂಡಿದ ಪ್ರತಿಮಾ ಪೂರ್ಣಕಥೆ. "ಕಲಾನಿಧಿ" ಸುಬ್ಬಣ್ಣ ನೆಂಬ ಸಂಗೀತಗಾರನೊಬ್ಬನ ಬದುಕಿನ ಚಿತ್ರಣ. ಬಂಧನ ಉನ್ನತ ಪದವೀಧರ ಪ್ರಾಧ್ಯಾಪಕ ಡಾ. ಆನಂದ ತನ್ನ ಶಿಷ್ಯೆ ಕ್ರೈಸ್ತ ಯುವತಿ ಕ್ಲಾರಾಳೊಂದಿಗೆ ಪ್ರೇಮ ಬೆಳೆಸಿ ಮದುವೆ ಯಾಗಲಾರದೆ ಒದಗಿ ಬಂದ ದುರಂತದ ಕಥೆಯಾಗಿದೆ.

ಪ. ಸು. ಭಟ್ಟರು ಕುರುಡು ಕಣ್ಣು, ಸ್ವರ್ಗಸುಖ, ಜಾರುಬಂಡೆ, ಆತ್ಮಾರ್ಪಣೆ ಕಾದಂಬರಿಗಳನ್ನು ಬರೆದಿದ್ದಾರೆ. ಮೊದಲಿನ ಮೂರು ಕಾದಂಬರಿಗಳಲ್ಲಿ ಹೆಣ್ಣಿನ ಕೊರಗು, ಧರ್ಮದ ಅಂಧತೆ, ಬಡತನದ ಸಂಕಷ್ಟ, ಹೆಣ್ಣು ಗಂಡುಗಳ ಪ್ರೇಮ ಕಾಮ ಪ್ರಣಯುಗಳ ರಮ್ಯ ಚಿತ್ರಣವಿದೆ.

ಮಾಳಕೋಡ ನಾರಾಯಣರವರು 'ತ್ಯಾಗ' ಹಾಗೂ 'ಬಿಚ್ಚಿದ ಗಂಟು' ಎಂಬೆರಡು ಕಾದಂಬರಿಗಳನ್ನು ಬರೆದಿದ್ದಾರೆ. ಶಿವರಾಂ ಹೆಗಡೆ ಬಾಳೇಗದ್ದೆಯವರು 'ಬಾಳಿನ ಸುಳಿ' ಸಾಮಾಜಿಕ ಕಾದಂಬರಿಯನ್ನು ಬರೆದಿದ್ದಾರೆ. ಅನಾಥನಾದ ಹರಿಹರ ಕುಟುಂಬದ ಹಾಗೂ ಸಮಾಜದ ಸಮಸ್ಯೆಗಳಿಂದ ದುರ್ಬಲನಾಗಿ ನಿರಾಶೆಯ ಸುಳಿಯಲ್ಲಿ ಬೆಂದು ಬೆಂಡಾಗುತ್ತಾನೆ. ಈ ಪರಿಸ್ಥಿತಿ

ಯಲ್ಲಿ ಧೀರಗತಿಯಿಂದ ಹೋರಾಡುವ ಸ್ಥಿತಿಯನ್ನು ಇಲ್ಲಿ ಚಿತ್ರಿಸಲಾಗಿದೆ. ಮಂಗರ್ಶಿಯವರ "ಮೂರು ಮುಖಗಳು" ಕಾದಂಬರಿಯಲ್ಲಿ ಸಾವಿತ್ರಿ ನಾಗವೇಣಿ ಸುಮಿತ್ರೆಯರ ಗೋಳಿನ ಕತೆಯಿದೆ.

ಐತಿಹಾಸಿಕ ಪೌರಾಣಿಕ ಕಾದಂಬರಿ ಬರೆದವರಲ್ಲಿ ನಾರಾಯಣ ವೆಂಕಟೇಶ ಕುರುಡಿಯವರು ಮುಖ್ಯರು. ಇವರ ಸಾವಿತ್ರಿ ಸತ್ಯವಾನ ಎಂಬ ಕಾದಂಬರಿ ಗ್ರಂಥಮಾಲೆಯ ಪ್ರಥಮ ಪುಷ್ಪ. ಆದರ್ಶ ಸತಿ ಸಾವಿತ್ರಿ ಹಾಗೂ ಪತಿ ಸತ್ಯವಾನರ ಪೌರಾಣಿಕ ಕಥಾಭಾಗವೇ ಈ ಪೌರಾಣಿಕ ಕಾದಂಬರಿಯ ಕಥಾವಸ್ತು. ಅಹಲ್ಯೋದ್ಧಾರ, ದಾಕ್ಷಾಯಿಣಿ ಇವು ಇತರ ಪೌರಾಣಿಕ ಕಾದಂಬರಿಗಳು. ಪದ್ಮಿನಿಗಾಗಿ ಹಾತೊರೆಯುತ್ತಿದ್ದ ಅಲ್ಲಾವುದ್ದೀನ ಖಿಲಜಿ ಎರಡು ಸಲ ದಂಡೆತ್ತಿ ಹೋಗಿ ಕೊನೆಗೆ ಚಿತ್ತೂರನ್ನು ಪೂರ್ಣವಾಗಿ ನಾಶಗೊಳಿಸಿದ ದುರಂತ ಕಥೆಯೆ ಇವರ 'ಪದ್ಮಿನಿ' ಎಂಬ ಐತಿಹಾಸಿಕ ಕಾದಂಬರಿಯ ಕಥಾವಸ್ತು. ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ವಿಷಯ ಮಹಾರಾಣಿ ಲಕ್ಷ್ಮೀಬಾಯಿ ಮತ್ತು ನಾನಾ ಸಾಹೇಬ ಪೇಶವೆ ಎಂಬ ಐತಿಹಾಸಿಕ ಕಾದಂಬರಿಗಳಲ್ಲಿ ವರ್ಣಿತವಾಗಿದೆ. ಶ್ರೀ ಕೃಷ್ಣದೇವರಾಯ ವಿಜಯ ಹಾಗೂ ಧರ್ಮಪಾಲ ಇವು ಇವರ ಇನ್ನಿತರ ಐತಿಹಾಸಿಕ ಕಾದಂಬರಿಗಳು.

ಪತ್ತೇದಾರಿ ಕಾದಂಬರಿಗಳೆಂದರೆ ಸುಬ್ರಾಯ ಕೃಷ್ಣ ಹೆಗಡೆಯವರ 'ಶವಗಳ ಸಾಗಾಟ' ಮಂಗರ್ಶಿಯವರ 'ಭೂತ ಗೃಹದ ರಹಸ್ಯ' ಮತ್ತು 'ಸೇಡು.'

ಇಂಗ್ಲೀಷ ಕಾದಂಬರಿಗಳನ್ನು ಪ್ರಾ. ನಾಗರಾಜ ಅವರು ಅನುವಾದಿಸಿದ್ದಾರೆ. ರಶಿಯನ್ ಎರಡು ಕಾದಂಬರಿಗಳನ್ನು

ಸುಬ್ಬಣ್ಣ ಎಕ್ಕುಂಡಿಯವರು ಅನುವಾದಿಸಿದ್ದಾರೆ. ಎಮಿಲಿ ಬ್ರಾಂಟೆಳ ರಮ್ಯ ಕಾದಂಬರಿ 'ವುದರಿಂಗ ಹೈಟ್ಸನ್ನು' ಪ.ಸು. ಭಟ್ಟರು ಕನ್ನಡಕ್ಕೆ ಅನುವಾದಿಸಿದ್ದಾರೆ. ಥಾಮಸ್ ಹಾರ್ಡಿಯ 'ವುಡ್ ಲ್ಯಾಂಡರ್ಸ' ಕಾದಂಬರಿಯನ್ನು 'ಮಲೆನಾಡಿಗರು' ಎಂದು ಹಾಗೆಯೇ ಶ್ರೀ ಖರೆಯವರ ಮರಾಠಿ ಕಾದಂಬರಿಯಿಂದ "ಬರ್ಲಿನ ಬಂದಿತು ಗಂಗೆಯ ತಡಿಗೆ" ಎಂದು ಗೌರೀಶ ಕಾಯ್ಕಿಣಿಯವರು ಅನುವಾದಿಸಿದ್ದಾರೆ. "ಬಿಳಿಕೊಕ್ಕರೆ" ಮತ್ತು "ಮಣ್ಣಿನ ಮನುಷ್ಯ" ಕೃತಿಗಳನ್ನು ಅನುವಾದಿಸಿ ಪ್ರಕಟಿಸಿದ್ದಾರೆ. ಮ. ಗ. ಶೆಟ್ಟಿಯವರು ಬಾಬಾ ಬೋರಕರರ 'ದೇವದಾಸಿ' ಯನ್ನು ಗಣಪತಿ ಶರ್ಮರು ಯಶಪಾಲರ 'ವಿದ್ಯಾ'ವನ್ನು ಮನ್ಮಥ ನಾಥ ಗುಪ್ತರ 'ಪಶ್ಚಾತ್ತಾಪ' ಕಾದಂಬರಿಗಳನ್ನು ಅನುವಾದ ಮಾಡಿ ಪ್ರಕಟಿಸಿರುತ್ತಾರೆ. ಪಾಂಡುರಂಗ ದಾಮೋದರ ಶಹಾಣೆಯವರು ಖಾಂಡೇಕರರ 'ಕಾಂಚನಮೃಗ' ಮರಾಠಿ ಕಾದಂಬರಿಯನ್ನು ಚೆನ್ನಾಗಿ ಅನುವಾದಿಸಿದ್ದಾರೆ. ಮನೋಹರ ಮಳಗಾಂವಕರರ ಆಂಗ್ಲ ಭಾಷೆಯ ಕಾದಂಬರಿಯಾದ 'ಪ್ರಿನ್ಸೆಸ್' ರಾಜಮಹಾರಾಜರು ಎಂಬ ಹೆಸರಿನಲ್ಲಿ ಅನುವಾದಿಸಿದ್ದಾರೆ.

ಎಸ್. ಆರ್. ಹೆಗಡೆಯವರು 'ಬದುಕು ಜಟಕಾ ಬಂಡಿ' ಕಾದಂಬರಿ ಬರೆದರೆ ಗೋಪಾಲಕೃಷ್ಣ ಹೆಗಡೆಯವರು 'ದೀಪಕದ ಕುಡಿ' ಕಾದಂಬರಿ ಬರೆದಿದ್ದಾರೆ. ಪಂಡಿತ ವಿಘ್ನೇಶ್ವರ ಶರ್ಮರು "ಶ್ರೀನಾಥ" ಕಾದಂಬರಿ ಬರೆದಿದ್ದಾರೆ. ವಿದ್ಯಾರ್ಥಿಗಳಿದ್ದಾಗಲೇ ಕಾದಂಬರಿ ಬರೆದವರು ನಮ್ಮ ಜಿಲ್ಲೆಯಲ್ಲಿದ್ದಾರೆ. ಜಿ. ಎಸ್. ಹೆಗಡೆ ಕಣ್ಣಿಯವರು "ಬಿಲದೊಳಗಿನ ಬಲೆಯಲ್ಲಿ" ಕಾದಂಬರಿ

ಬರೆವರೆ ಪಿ. ಎಸ್. ಪೆಗಡೆಯುವರು "ಪ್ರತಿಫಲ" ಕಾದಂಬರಿ ಬರೆದಿದ್ದಾರೆ.

ಸಣ್ಣಕಥೆಗಳು

ಕಾದಂಬರಿಯ ನಂತರ ಸಣ್ಣಕತೆಯೆ ಅತ್ಯಂತ ಲೋಕ ಪ್ರಿಯವಾಗಿವೆ. ಈ ವರೆಗೆ ಪತ್ರಿಕೆಯಲ್ಲಿ ಬಂದ ಸಣ್ಣ ಕತೆಗಳ ಸಂಖ್ಯೆ ಹೇಳುವುದು ಕಷ್ಟಕರ. ಬೇರೆಬೇರೆ ಪತ್ರಿಕೆಗಳಲ್ಲಿ ಒಳ್ಳೆಯ ಕಥೆಗಳು ಅಲ್ಲೊಂದು ಇಲ್ಲೊಂದು ಕಾಣಿಸಿಕೊಳ್ಳುತ್ತವೆ. ಕೆಲವು ಮಾತ್ರ ಒಳ್ಳೆಯ ಕೃತಿಗಳಾಗಿವೆ. ಯಶವಂತ ಚಿತ್ತಾಲರು ತಮ್ಮ ಸಂದರ್ಶನ ಕಥಾ ಸಂಕಲನದಿಂದ ಕಲಾತ್ಮಕ ಕಥೆಗಾರ ರೆಂದು ಖ್ಯಾತಿ ಪಡೆದಿದ್ದಾರೆ. 'ಅಬೋಲಿನ' ಹಾಗೂ 'ಸಂದ ರ್ಶನದ' ದ ಕತೆಗಳು ಚಿತ್ತಾಲರ ಕಲಾಶುದ್ಧಿಯ ಪೆಚ್ಚುಗಾರಿಕೆ ಯನ್ನು ತೋರಿಸಿ ಕೊಟ್ಟಿವೆ. 'ಆಟ' ಕಥಾ ಸಂಕಲನ ಬದುಕಿನ ಆಳವಾದ ಅರ್ಥವನ್ನು ಹೊತ್ತು ಹೊರಬಂದಿದೆ. ಇತ್ತೀಚಿನ ಸಂಕಲನಗಳೆಂದರೆ 'ಆಯ್ದ ಕಥೆಗಳು' 'ಕಥೆಯಾದಳು', ಹುಡುಗಿ'. ಗೋಪಾಲ ಕೃಷ್ಣ ಅಡಿಗರು ಇವರ ಕತೆಗಳನ್ನು ಓದಿ ಕೆಲವು ವಿಷಯಗಳಲ್ಲಿ ಕನ್ನಡಕ್ಕೆ ಅಪೂರ್ವ ಎನ್ನಿಸುವ ಕಾಣಿಕೆ ಗಳು ಎಂದು ಹೇಳಿದ್ದಾರೆ. ಶಾಂತಿನಾಥ ದೇಸಾಯಿಯವರ ಮೂರು ಕಥಾಸಂಕಲನಗಳಾದ 'ದಂಡೆ' 'ಮಂಜುಗಡ್ಡೆ' 'ಕ್ಷಿತಿಜ' ಹೊರಬಂದಿವೆ. ಮಂಜುಗಡ್ಡೆ ಇವರ ಪ್ರಥಮ ಕಥಾ ಸಂಕಲನ. ಇದರಲ್ಲಿ ಒಳ್ಳೆಯ ಚೆಲುವನ್ನು, ಹಿಡಿತವನ್ನು ಸಾಧಿಸಿಕೊಂಡಿದ್ದಾರೆ. ಅಂತರಂಗದ ಭಾವನೆಗಳನ್ನು ಸುವ್ಯಕ್ತ ಮಾಡುವ ಇವರ ಕತೆಗಳು ಮಹತ್ತರವಾಗಿವೆ. 'ಕ್ಷಿತಿಜ'ದಲ್ಲಿ

ಕೂಡ ಮನೋಜ್ಞ ಶೈಲಿಯ ಕಥೆಗಳಿವೆ. 'ದಂಡೆ' ಮೂರನೆಯ ಕಥಾಸಂಕಲನ. ಇದರ ಮುನ್ನುಡಿಯಲ್ಲಿ ಡಾ॥ ಗುರುರಾಜ ಆ ಮೂರರು ಶಾಂತಿನಾಥ ದೇಸಾಯಿಯವರನ್ನು ಕನ್ನಡದ ಪ್ರಮುಖ ಲೇಖಕರ ಸಾಲಿಗೆ ಸೇರಿದವರೆಂದು ಹೇಳಿದ್ದಾರೆ. ಅನುಭವವನ್ನು ವಿಶ್ಲೇಷಿಸುವಲ್ಲಿ ಸನ್ನಿವೇಶಗಳನ್ನು ವ್ಯವಸ್ಥೆಗೊಳಿಸುವಲ್ಲಿ ದೇಸಾಯಿಯವರ ಬೌದ್ಧಿಕತೆ ಸಮರ್ಥವಾಗಿ ದುಡಿಯುತ್ತದೆ ಎಂದು ಪ್ರಾ. ಜಿ. ಎಚ್. ನಾಯಕರ ಅಭಿಪ್ರಾಯವಾಗಿದೆ.

ಪಿ.ವಿ. ಶಾಸ್ತ್ರಿಯವರು ಉತ್ತಮ ಕತೆಗಾರರು 'ಅವಶೇಷ' ಕತೆಗೆ ಪ್ರಜಾವಾಣಿಯ ಬಹುಮಾನ ದೊರಕಿದೆ. ಇವರ ಕಥಾ ಸಂಕಲನ 'ದೇವರು' ಇಲ್ಲಿಯ ಕಥೆಗಳು ಗದ್ಯದ ಸೊಗಸಿನಿಂದ ತುಂಬಿ ತುಳುಕುತ್ತಿವೆ.

ಗೋಪಾಲ ಕೃಷ್ಣ ಹೆಗಡೆಯವರ ಎರಡು ಕಥಾಸಂಕಲನಗಳು ಹೊರಬಂದಿವೆ. 'ನವ್ಯ ಕಥೆಗಳು' 'ಹೊಂಬೆಳಕು' ರಂಜನೀಯ ಕಥೆಗಳು ಈ ಸಂಕಲನದಲ್ಲಿವೆ.

ದಯಾನಂದ ತೊರ್ಕೆಯವರ ಎರಡು ಕಥಾಸಂಕಲನಗಳು ಹೊರಬಂದಿವೆ. ಉಡುಗೊರೆ, ಹಾಗೂ ದಯಾನಂದ ತೊರ್ಕೆಯವರ ಕಥೆಗಳು. ಡಾ. ಎಲ್. ಆರ್. ಹೆಗಡೆಯವರ 'ಹಕ್ಕಿನರಸಣ್ಣ'ದಲ್ಲಿ ಗ್ರಾಮೀಣ ಜನರ ಆಚಾರ ವಿಚಾರಗಳನ್ನು ಜೀವನದ ವಿಧಾನಗಳನ್ನು ಚಿತ್ರಿಸುವ ಕತೆಗಳಿವೆ.

ದಿ. ಪ. ಸು. ಭಟ್ಟರು ಅಂಗೇಲಾ ಪ್ರಕಟಿಸಿದ್ದಾರೆ. ಸಾಹಿತ್ಯಕ್ಕೂ ಜೀವನದ ಉದ್ಧಾರಕ್ಕೂ ತೀರ ಸಂಬಂಧವುಂಟೆಂಬ ಪ್ರಾಮಾಣಿಕ ಪ್ರಗತಿಶೀಲರು ಎನ್ನುವದು ಸ್ಪಷ್ಟವಾಗುತ್ತದೆ.

ವಿಷ್ಣು ನಾಯಕರ ಕಥಾಸಂಕಲನವಾದ 'ಕಣ್ಣೀರ ಕತೆಗಳು 'ಹೆಣ್ಣಿನ ಸುತ್ತಲೂ ಹೆಣೆದ ನಿರೂಪಣೆಗಳಾಗಿವೆ. ಡಾ. ಕೆ. ಜಿ. ಶಾಸ್ತ್ರಿಯುವರು ಮುನ್ನುಡಿ ಬರೆಯುತ್ತಾ "ಇಲ್ಲಿಯ ಹೆಂಗಳೆಯುವರ ವ್ಯಥೆಯು ಕಥೆ ಕತೆಗಾರರ ಹಂಗರುಳನ್ನು ತಟ್ಟಿದೆ ಎಂದಿದ್ದಾರೆ.

ಇದಲ್ಲದೆ ಶಿವರಾಮ ಹೆಗಡೆ ಬಾಳೆಗದ್ದೆಯುವರ 'ತೆರೆದ ತೆರೆ', ಶಿವರಾಮ ಗಂಗೊಳ್ಳಿಯುವರ 'ಪಿಶಾಚ ಗೃಹ'.ಎಚ್.ಡಿ. ನಾಯ್ಕರರ 'ತರಂಗ', ವೆಂಕಟೇಶ ಹುಣಶಿಕಟ್ಟೆಯುವರ 'ಜೀವನ ತರಂಗ', ಶಿಗೇಹಳ್ಳಿಯುವರ 'ಹರಿದ ಸೆರಗು', ವಿ.ಜಿ. ಭಟ್ಟರ 'ಸಹ್ಯಾದ್ರಿ', ಬುರುಕಿ, ನಾ.ಸು. ಭರತನ ಹಳ್ಳಿಯುವರ 'ಬಯಲು ಬತ್ತಲೆ'. ಡಿ.ವಿ.ಜಿ. ಶಾನಭಾಗರ 'ಕೆಲವು ಚಿತ್ರಗಳು' 'ಇಂದ್ರ ಧನುಷ್ಯ' ಬಿ.ಪಿ. ಶಿವಾನಂದರಾವರ 'ಸೆಳೆತ' 'ಮುಕ್ತಿ' ಸಂಕಲನಗಳು ಪ್ರಕಟವಾಗಿವೆ. ಜಯುಂತ ಕಾಯ್ಕಿಣಿಯುವರ 'ಗಾಳ' ಹಾಗೂ 'ತೆರೆದಷ್ಟೇ ಬಾಗಿಲು' ಎಂ. ಎಚ್. ನಾಯ್ಕರ 'ಮಾಸ್ತಿ' ಸಂಕಲನಗಳು ಪ್ರಸಿದ್ಧಿ ಪಡೆದಿವೆ.

ಈ ಜಿಲ್ಲೆಯುಲ್ಲಿ ಕತೆ ಬರೆಯುವವರು ತುಂಬಾ ಜನರಿದ್ದು ಕೆಲವು ಪತ್ರಿಕೆಗಳಲ್ಲಿ ಇವರ ಕತೆಗಳು ಪ್ರಕಟವಾಗುತ್ತಲೇ ಇರುತ್ತವೆ. ಅವರೆಂದರೆ ಶಾ. ಮಂ. ಕೃಷ್ಣರಾಯು, ಟಿ. ಎಂ. ಸುಬ್ಬಾರಾವ, ಜಯುಂತ ಕಾಯ್ಕಿಣಿ, ಎಂ. ಎಚ್. ನಾಯುಕ

ಬಾಡ, ಬನವಾಸಿ ವೆಂಕಟೇಶ ದೀಕ್ಷಿತ, ಸುಂದರ ನಾಡಕರ್ಣಿ, ಆರ್. ವಿ. ಭಂಡಾರಿ, ಕನ್ನಿಕಾ ಹೆಗಡೆ, ಜಿ. ಎಸ್. ಅವಧಾನಿ.

ಎಲ್ಲಾ ಕಥೆಗಳನ್ನು ಸಂಕಲನ ರೂಪದಲ್ಲಿ ಪ್ರಕಟಿಸುವ ಧೈರ್ಯ ಯಾರೂ ಇನ್ನು ಮಾಡಿಲ್ಲ. ಬೇರೆ ಬೇರೆ ಪತ್ರಿಕೆ ಓದಿದಾಗ ಕೆಲವು ಕತೆಗಾರರು ಕಣ್ಣಿಗೆ ಬೀಳುತ್ತಾರೆ. ಮಹಾಬಲ ಮೂರ್ತಿಯವರ 'ಬಾವಿ' ಆರ್. ವಿ. ಭಾಗ್ವತರ 'ಸೂತ್ರ' ಕುಮಾರ ಜೋಶಿಯವರ 'ಗುಮ್ಮ' ನಾಗಭೂಷಣ ಹೆಗಡೆಯವರ ಅವಕುಂಠನ, ಭರತನ ಹಳ್ಳಿಯವರ 'ತಿರುವು' ಎಂ. ಎಚ್. ನಾಯಕ ಬಾಡದವರ "ಸುಬ್ಬಿ" 'ಭಾವ ಬಂದನಮ್ಮ' ಮುಂತಾದವರ ಕತೆಗಳಲ್ಲಿ ಪ್ರತಿಭೆಯನ್ನು ಕಾಣಬಹುದು. ಇನ್ನೂ ಕೆಲವರ ಕತೆಗಳೂ ಕಣ್ಣಿಗೆ ಬೀಳದೆಯೂ ಹೋಗಬಹುದು.

ನಾಟಕ ಸಾಹಿತ್ಯ

೧೯ನೆಯ ಶತಮಾನದ ಕೊನೆಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಮರಾಠಿ ಕಂಪನಿ ನಾಟಕಗಳ ಪ್ರಯೋಗ ನಡೆದಿರುವುದರಿಂದ ಅಪ್ರತ್ಯಕ್ಷವಾಗಿ ಕನ್ನಡ ನಾಟಕಗಳ ರಚನೆಗೆ ಕಾರಣವಾದವು. ಆದರೆ ನಾಟಕ ಸಾಹಿತ್ಯದ ಬೆಳವಣಿಗೆಗೆ ಮೂಲ ಪುರುಷರು ಸೂರಿ ವೆಂಕಟ್ರಮಣ ಶಾಸ್ತ್ರಿಗಳು ಎಂದು ಹೇಳಬಹುದು. ೧೮೭೫ನೇ ಇಸವಿಯ ಸುಮಾರಿಗೇ ಇವರು 'ಹವ್ಯಕ ಹಿತೇಚ್ಛು' ಎಂಬ ಹೆಸರಿನಿಂದ 'ಇಗ್ಗಪ್ಪ ಹೆಗಡೆಯ ವಿವಾಹ ಪ್ರಹಸನ' ಎಂಬ ಚಿಕ್ಕ ನಾಟಕವನ್ನು ರಚಿಸಿದ್ದಾರೆ. ಈ ನಾಟಕದ ಮಹತ್ವ ಏನಂದರೆ ಹವ್ಯಕ ಜನರ ಮನೆಮಾತಿನಲ್ಲಿ ರಚಿತವಾದದ್ದು ಪ್ರಪ್ರಥಮ ಸಾಮಾಜಿಕ ನಾಟಕ.

ಹೊದಲಿನ ನಾಟಕಗಳಲ್ಲಿ ಸಂಗೀತವೆ ಸಂಭಾಷಣೆಗಿಂತ ಹೆಚ್ಚಾಗಿ ಇರುತ್ತಿದ್ದವು. ಇಂತಹ ನಾಟಕಗಳನ್ನು ಹುಲಿಮನೆ ಸೀತಾರಾಮ ಶಾಸ್ತ್ರಿಗಳು, ಎಂ. ಮಾಧವರಾಯರು ಹಾಗೂ ರಾ. ವೆ. ವಾಲಗಳ್ಳಿಯವರು ಬರೆದರು. ಇವರು ನಟರೂ ನಿರ್ದೇಶಕರೂ ಆಗಿ ಜಿಲ್ಲೆಯಲ್ಲಿ ನಾಟಕಗಳ ಪ್ರಯೋಗ ನಡೆಯಿಸಿ ಜಿಲ್ಲೆಯಲ್ಲಿ ನಾಟಕಾಭಿರುಚಿ ಬೆಳೆಸಿದರು. ಸಂಗೀತಯುಕ್ತ ಸಾಮಾಜಿಕ ನಾಟಕಗಳ ಜೊತೆಗೆ ಪೌರಾಣಿಕ ಐತಿಹಾಸಿಕ ನಾಟಕಗಳನ್ನು ಬರೆದರು ಹುಲಿಮನೆ ಸೀತಾರಾಮ ಶಾಸ್ತ್ರಿಗಳ 'ಪನ್ನದಾಸಿ' 'ಪುತ್ರಾಪೇಕ್ಷೆ', 'ಸಂಶಯ ಸಾಮ್ರಾಜ್ಯ', ಎಂ.ಮಾಧವರಾಯರ 'ಕಿತ್ತೂರ ಚನ್ನಮ್ಮ,' 'ಟಿಪ್ಪೂಸುಲ್ತಾನ' ಮತ್ತು ರಾ. ವೆ. ವಾಲಗಳ್ಳಿಯವರ 'ಶಹಜಾನ' ತುಂಬಾ ಪ್ರಸಿದ್ಧ. ಜಿಲ್ಲೆಯ ನಾಟಕ ಸಾಹಿತ್ಯಕ್ಕೆ ತಮ್ಮ ಕೃತಿಯನ್ನು ಅರ್ಪಿಸಿದವರಲ್ಲಿ ಜಿ. ಜಿ. ಹೆಗಡೆ ರಾಜಾರಾಂ ಚಿತ್ರಗಿಪುರ, ಜಿ.ಪಿ. ನಾಯಕ, ಗಂಗಾಧರ ಶಾಸ್ತ್ರಿ, ಶಾ.ಮಂ. ಕೃಷ್ಣರಾಯ, ರೋಹಿದಾಸ ಮಹಾಲೆ, ಡಾ॥ ಎನ್. ಆರ್. ನಾಯ್ಕ, ಕೆ. ಎಚ್. ಪ್ರಭು, ಬಿ. ಪಿ. ಶಿವಾನಂದ ಮುಂತಾದವರು ಮುಖ್ಯರು.

ಜಿ. ಜಿ. ಹೆಗಡೆಯವರು ಹತ್ತಕ್ಕೂ ಹೆಚ್ಚಾಗಿ ನಾಟಕಗಳನ್ನು ಹದಿನೈದಕ್ಕಿಂತಲೂ ಹೆಚ್ಚು ರೇಡಿಯೋ ಏಕಾಂಕಗಳನ್ನು ಬರೆದಿರುತ್ತಾರೆ. 'ಕೆಸರಿನಲ್ಲಿ ಕಮಲ', 'ಜಲೆಜಾವ', 'ಅತ್ತಿಗೆ', 'ದಾರಿದೀಪ', 'ಅಹಲ್ಯೋದ್ಧಾರ', 'ಪುಂಡಲೀಕ', 'ಕುರುಕ್ಷೇತ್ರ' ಈ ನಾಟಕಗಳು ಪ್ರೇಕ್ಷಕರಿಗೆ ಮನರಂಜನೆ ನೀಡಬಲ್ಲವು. ಹೆಚ್ಚು ಸಾಮಾಜಿಕ ನಾಟಕಗಳೇ.

ರಾಜಾರಾಂ ಚಿತ್ರಗಿ ಮಠರು ಬರೆದ ಚಿತ್ತೂರ ಪದ್ಮಿನಿ ಚಿತ್ತೂರಿನ ಒಂದು ಐತಿಹಾಸಿಕ ಉಜ್ವಲ ನಾಟಕ. ಭಾರತದ ಚರಿತ್ರೆಯಲ್ಲಿ ಪದ್ಮಿನಿಯ ಹೋರಾಟದ ಕತೆ ಮರೆಯಲಾರದಂತ ಹುದು. ಪಾತ್ರಪೋಷಣೆ, ದೃಶ್ಯ ಜೋಡಣೆ. ನಾಟಕೀಯ ತಂತ್ರಗಳಿಂದ ನಾಟಕ ಎಲ್ಲಾ ರೀತಿಯಿಂದಲೂ ಉತ್ತಮ ವಾಗಿದೆ. ಇವರ ಇನ್ನೊಂದು ಕೃತಿ "ಸಂಭಾಜಿ" ರಂಗದಲ್ಲಿ ಬಂದರೂ ಅಚ್ಚಾಗದೆ ಉಳಿದಿದೆ. ಹಾಗೆಯೇ ಪಂಡಿತ ವಿಘ್ನೇಶ್ವರ ಶರ್ಮರ "ಭೂ ಕೈಲಾಸ", "ರುಕ್ಮಿಣಿ ಸ್ವಯಂವರ", "ಮದುವೆಯ ಮಬ್ಬು" ಮತ್ತು "ಪ್ರೇಮ ಸಂದೇಶ".

ಸುಬ್ರಾಯ ಹೆಗಡೆ ಕವಲಕೊಪ್ಪರವರು, ಬರೆದ "ವಿಶ್ವಾಮಿತ್ರ ತಪೋಭಂಗ", ರಾಮಚಂದ್ರ ಮಂಜಭಟ್ಟರವರ "ರಾವಣ ಗರ್ವಭಂಗ"ವನ್ನು, ಗಂಗಾಧರ ಶಾಸ್ತ್ರಿಗಳು "ಶಕುಂತಲಾ" ಸಂಸ್ಕೃತ ನಾಟಕದ ರೂಪಾಂತರವನ್ನು ಬರೆದಿರುತ್ತಾರೆ. ಗೋಪಾಲ ಕೃಷ್ಣ ಪಿ. ನಾಯಕರು "ಆರಾತ್ರಿ". 'ಒಂದಕ್ಕೆ ಎರಡು", "ಅಬ್ಬಾ ಏನು ಹುಡುಗಿ": "ಜೀವನ ಸಂಜೀವಿನಿ". "ನೂರು ರೂಪಾಯಿ ನೋಟು", "ದೇವಮೂರ್ತಿ", "ನಟ ನಾಯಕ", "ಬಯಸಿದ ಬಯಕೆ". ನಾಟಕಗಳನ್ನು ಬರೆದಿರು ತ್ತಾರೆ. 'ಆರಾತ್ರಿ' ಇಂಗ್ಲೀಷ ನಾಟಕವಾದ Home at Seven ಆಧರಿಸಿ ಬರೆಯಲಾಗಿದೆ. "ಜೀವನ ಸಂಜೀವಿನಿ" ನಾಟಕವು Invitation to immortality ನಾಟಕದ ಭಾಷಾಂತರ. ಮರಾಠಿ ನಾಟಕಕಾರರಾದ ರಾಂಗಣೇಕರರ 'ಬಡೆ ಬಾಪಕೆ ಬೇಟೆ' ನಾಟಕದ ರೂಪಾಂತರವೇ 'ಅಬ್ಬಾ ಏನು ಹುಡುಗಿ' ಎನ್. ಆರ್. ನಾಯಕರ 'ವಿಮೋಚನೆ,' ಶಾ. ಮಂ. ಕೃಷ್ಣ

ರಾಯರ 'ಬಂಡಲ್ ಬಹದ್ದೂರ', 'ಮುತ್ತೈದೆಯರು' ಎಂಬ ನಾಟಕಗಳನ್ನು ಬರೆದಿದ್ದಾರೆ. ಗೋಹಿದಾಸ ಮಹಾಲೆಯವರ 'ಕೈ ಹಿಡಿದವಳು', 'ಧರ್ಮಸಂಗಮ', 'ನಿಗೂಢ ರಹಸ್ಯ', 'ಮುಳ್ಳಿನ ಹಾಸಿಗೆ', ಕೆ. ವಿ. ಕು. ರವರ 'ಸ್ವಪ್ನ ಸ್ವಯಂವರ' ಶ್ರೀ. ಸಿ. ಹೆಗಡೆ ತಾರಖಂಡರ 'ಆದರ್ಶ ಶಿಕ್ಷಕ' ಮತ್ತು ಮಲ ತಾಯಿ, ಎಸ್. ರಾಮನಾಥ ತ್ಯಾಗರಿ ಅವರ 'ಅನ್ಯಾಯ' ಕೆ. ಎಚ್. ಪ್ರಭುರವರ 'ಧರ್ಮೋ ರಕ್ಷತಿ ಭಕ್ಷಿತ': ಮತ್ತು 'ಹೋಲಿಯ ಬಂದ ಹೋಲಿಯ', ಬಿ. ಪಿ. ಶಿವಾನಂದರ 'ಕೈ ಕೊಟ್ಟ ವರದಕ್ಷಿಣೆ' 'ಬದುಕು ಬಯಲಾಟ', ಗೌರೀಶ ಕಾಯ್ಕಿಣಿ ಯವರು 'ಕರ್ಣಾಮೃತ' 'ಆಕಾಶ ನಾಟಕ'ಗಳು ರೇಡಿಯೋ ರೂಪಕ ಸಂಗ ಹಗಳು. ಬರೆದಿದ್ದಾರೆ.

ಪ್ರವಾಸ ಸಾಹಿತ್ಯ

ದೇಶ ನೋಡಬೇಕು ಇಲ್ಲವೆ ಕೋಶ ಓದಬೇಕು ಎಂಬುದು ಹಳೆಯ ಅನುಭವದ ನುಡಿ. ವಿವಿಧ ದೇಶಗಳ ಜನರ ರೀತಿ–ನೀತಿ ಗಳು, ವ್ಯವಸಾಯ ಉದ್ಯಮಗಳು, ಕಲೆ, ಶಿಲ್ಪಗಳು, ಪ್ರವಾಸಿ ಗರನ್ನೂ ಆಕರ್ಷಿಸುತ್ತವೆ. ಎಲ್ಲರಿಗೂ ಎಲ್ಲ ದೇಶಗಳನ್ನೂ ನೋಡುವ ಪುಣ್ಯ ದೊರೆಯಲಾರದು. ಇಂಥ ಅವಕಾಶದೊರೆತ ಪ್ರವಾಸಿಗರು ತಮ್ಮ ಅನುಭವಗಳನ್ನು ಬರೆದಿಟ್ಟರೆ ಇತರರಿಗೂ ಅದರಿಂದ ಪ್ರಯೋಜನ ಲಭಿಸುತ್ತದೆ. ಅವರ ಕೃತಿಯು ಕೋಶ ದಲ್ಲಿ ಪ್ರವೇಶಿಸಿ ಅನುಭವದ ಜ್ಞಾನವನ್ನು ಪಡೆಯ ಬಹುದು ಕಾರಣ ಪ್ರವಾಸ ಸಾಹಿತ್ಯ ಅತ್ಯಂತ ಜನಪ್ರಿಯ ಸಾಹಿತ್ಯ ಪ್ರಕಾರ ಗಳಲ್ಲೊಂದು.

ಪ್ರವಾಸ ಸಾಹಿತ್ಯವನ್ನು ಬರೆದವರು ಈ ಜಿಲ್ಲೆಯಲ್ಲಿ ಸಾಕಷ್ಟಿಲ್ಲ. ದಿನಕರ ದೇಸಾಯಿಯವರ 'ನಾ ಕಂಡ ಪಡುವಣ' ಹಾಗೂ ಕೃಷ್ಣಾನಂದ ಕಾಮತರ' 'ನಾನು ಅಮೇರಿಕೆಗೆ ಹೋಗಿದ್ದೆ' ಹಾಗೂ 'ವಂಗದರ್ಶನ,' ವಿ ಎನ್. ಆಚಾರ್ಯರ 'ಯಾತ್ರಿಕನ ಪತ್ರಗಳು' ಶಾ. ಮಂ. ಕೃಷ್ಣರಾಯರ 'ದೇವ ಭೂಮಿ ಗೋಮಾಂತಕ'. ಜಿ. ಪಿ. ನಾಯಕರವರ 'ಈ ಪರಿಯ ಸೊಬಗು' ಇನ್ನು ಕೆಲವು ಪತ್ರಿಕೆಗಳಲ್ಲಿ ಬಿಡಿ ಲೇಖನ ಗಳು ಪ್ರಕಟವಾಗಿವೆ. ದಿನಕರ ದೇಸಾಯಿಯವರು ಯುರೋ ಪಿನ ಜನರ ಜೀವನ ಅಲ್ಲಿಯ ಜನರ ಉದ್ಯಮಶೀಲತೆ, ಶಿಸ್ತು, ವೇಷ ಭೂಷಣಗಳು ರೀತಿ ನೀತಿಗಳನ್ನು ಯಥಾವತ್ತಾಗಿ ಚಿತ್ರಿಸಿ ದ್ದಾರೆ. ಅನೇಕ ರಸ ನಿಮಿಷಗಳನ್ನು ಮೆಲುಕು ಹಾಕಿದ್ದಾರೆ. ಕೃಷ್ಣಾನಂದರ 'ನಾನು ಅಮೇರಿಕೆಗೆ ಹೋಗಿದ್ದೆ' ಒಂದು ಉತ್ತಮವಾದ ವಿವರಗಳನ್ನು ಕೊಡುವ ಗ್ರಂಥ. ಸಾಮಾನ್ಯ ಜನರಿಗೆ ಅಮೇರಿಕೆಯ ಪರಿಚಯ ಈ ಗ್ರಂಥದಿಂದಾಗುವದು. ಆಲ್ಲಿಯ ಜನರ ರೀತಿ ನೀತಿ ನಡಾವಳಿ, ಅವರ ಜೀವನ ಮೌಲ್ಯ ಗಳು, ವೇಷಭೂಷಣಗಳು, ಅವಿಶ್ರಾಂತ ದುಡಿತ ಈ ವಿಷಯ ವನ್ನೆಲ್ಲ ತಮ್ಮ ಗ್ರಂಥದಲ್ಲಿ ಮನಮುಟ್ಟುವಂತೆ ವಿವರಿಸಿದ್ದಾರೆ. 'ವಂಗದರ್ಶನದಲ್ಲಿ' ಬಂಗಾಲದಲ್ಲಿಯ ಜನರ ಆಚಾರ ವಿಚಾರ ವ್ಯವಹಾರ ಸರಕಾರದ ವಿಷಯವನ್ನೆಲ್ಲ ಹಾಸ್ಯಮಯವಾಗಿ ಚಿತ್ರಿ ಸಿದ್ದಾರೆ.

ವಿಚಾರ ಸಾಹಿತ್ಯ

"ಲಲಿತ ಸಾಹಿತ್ಯ ಹಸಿರು ನಂದನವನವಾದರೆ ವಿಚಾರ ಸಾಹಿತ್ಯ ದುರ್ಗಮವಾದ ಗಿರಿ ಶಿಖರ" ಮನುಷ್ಯನ ಬದುಕಿನ ಎಲ್ಲಾ ಮುಖಗಳ ಕುರಿತೂ ಅಭ್ಯಾಸ ಪೂರ್ಣ, ಸಂಶೋಧನಾ

ತ್ಮಕ ತಾರ್ಕಿಕ ಜಿಜ್ಞಾಸೆಯೇ ವಿಚಾರ ಸಾಹಿತ್ಯ. ಸರ್ವಶ್ರೀ ಗೌರೀಶ ಕಾಯ್ಕಿಣಿ, ಬಿ. ಎಚ್. ಶ್ರೀಧರ, ಜಿ. ಆರ್. ಪಾಂಡೇಶ್ವರ, ಡಾ. ಎಲ್. ಆರ್. ಹೆಗಡೆ, ಡಾ. ಸದಾನಂದ ನಾಯಕ, ಡಾ. ಕೆ. ಜಿ. ಶಾಸ್ತ್ರಿ ಮುಂತಾದವರು ಮಹತ್ವಪೂರ್ಣ ವಿಚಾರ ಸಾಹಿತ್ಯ ರಚಿಸಿದ್ದಾರೆ.

ಉತ್ತರಕನ್ನಡದಲ್ಲಿ ವಿಚಾರ ಸಾಹಿತ್ಯಕ್ಕೆ ಗಮನಾರ್ಹವಾದ ಕಾಣಿಕೆ ಸಲ್ಲಿಸಿದವರಲ್ಲಿ ಶ್ರೀ ಗೌರೀಶ ಕಾಯ್ಕಿಣಿಯವರು ಪ್ರಮುಖರು. ಮಾರ್ಕ್ಸವಾದದಿಂದ ವಿಚಾರವಾದದ ತನಕ ಕಾಯ್ಕಿಣಿಯವರ ವಿಚಾರ ವಾಹಿನಿ ಹರಿದಿದೆ. ಮನಶ್ಶಾಸ್ತ್ರಕ್ಕೆ ಸಂಬಂಧಪಟ್ಟ ಮನೋವಿಜ್ಞಾನದ ರೂಪ ರೇಷೆಗಳು, 'ಮಾರ್ಕ್ಸವಾದ', ಪಶ್ಚಿಮದ ಪ್ರತಿಭೆ, ಸತ್ಯಾರ್ಥಿ, ವಿಚಾರ ವಾದ, ಬಾಳಿನ ಗುಟ್ಟು ಮುಂತಾದ ವೈಚಾರಿಕ ಗ್ರಂಥಗಳನ್ನು ಬರೆದಿದ್ದಾರೆ. ಪ್ರೀತಿ, ಗಂಡು-ಹೆಣ್ಣುಗಳ ವಿಶ್ಲೇಷಣೆ ರಂಜನೀಯವಾಗಿ, ಕಥಾ ಸಾಹಿತ್ಯದಂತೆ ನಿರೂಪಿತವಾಗಿದೆ. ಪ್ರಚಾರೋಪನ್ಯಾಸ ಮಾಲೆಯಲ್ಲಿ ಅಚ್ಚಾದ ಕಿರುಹೊತ್ತಿಗೆ 'ವಿಚಾರ ವಾದ' ಹೆಸರೇ ಸೂಚಿಸುವಂತೆ ವಿಚಾರ ಸಾಹಿತ್ಯಕ್ಕೆ ಕಿರಿದಾದ ಸತ್ವಪೂರ್ಣ ಕೊಡುಗೆಯಾಗಿದೆ.

ಬಿ. ಎಚ್. ಶ್ರೀಧರ ಕವಿಯಾದ ಇವರು ವಿಮರ್ಶಾ ಸಾಹಿತ್ಯವನ್ನು ಸಹ ರಚಿಸಿರುವರು. ಇವರ 'ಜ್ಞಾನಸೂತ್ರ' ಮತ್ತು 'ಕಾವ್ಯಸೂತ್ರ,' 'ರಾಜ್ಯಸೂತ್ರ,' ಹೊಸಗನ್ನಡ ಗದ್ಯ ಶೈಲಿ ವಿದ್ವತ್ತಿಗೂ ತಾರ್ಕಿಕ ವಿಮರ್ಶೆಗೂ ಸಾಕ್ಷಿಯಾಗಿವೆ. ಹೊಸಗನ್ನಡ ಸಾಹಿತ್ಯ ಶೈಲಿಯ ಗಮನಾರ್ಹ ಕೃತಿ 'ಬೇಂದ್ರೆ',

'ಈಲಿಯಟ' ಮನುವಿನ ಕೊಡುಗೆ ಕೃತಿಗಳು ವಿಚಾರ ಪ್ರಚೋದಕವಾಗಿವೆ.

ಜಿ.ಆರ್. ಪಾಂಡೇಶ್ವರರು ಬರೆದ ಯಕ್ಷಗಾನವನ್ನು ಕುರಿತ ಗ್ರಂಥ ಪ್ರೌಢವಾಗಿದೆ. ಡಾ. ಕೆ. ಜಿ. ಶಾಸ್ತ್ರಿಯವರು ಬರೆದ ವಿಮರ್ಶಾತ್ಮಕ ಪ್ರಬಂಧವಾದ 'ಉತ್ತರ ಕನ್ನಡದ ಹವ್ಯಕರ ಆಡು ನುಡಿ' ಭಾಷಾ ಶಾಸ್ತ್ರಕ್ಕೆ ನೀಡಿದ ಕಾಣಿಕೆ. ಈ ವಿಮರ್ಶಾ ಗ್ರಂಥಕ್ಕೆ ಕರ್ನಾಟಕ ವಿಶ್ವವಿದ್ಯಾಲಯದವರು ಡಾಕ್ಟರೇಟ ಪದವಿ ನೀಡಿದ್ದಾರೆ. ಡಾ. ಎಲ್. ಆರ್. ಹೆಗಡೆಯವರ ಮೂಢ ನಂಬಿಕೆಗಳು ಮನುಷ್ಯ ಕುಲದ ಮೂಢ ನಂಬಿಕೆಗಳಿಗೆ ಬೌದ್ಧಿಕ, ತಾರ್ಕಿಕ ಹಾಗೂ ವೈಜ್ಞಾನಿಕ ಕೊಡಲಿ ಏಟನ್ನಿಡುವದು. ಅಲ್ಲದೆ ಪುರಾಣ ಜಿಜ್ಞಾಸೆ ಹಾಗೂ 'ಕಾವ್ಯ ವ್ಯಾಸಂಗ' ಎಂಬ ವಿವೇಚನಾಪೂರ್ಣ ಗ್ರಂಥಗಳನ್ನು ಬರೆದಿದ್ದಾರೆ. 'ಕುಮಾರವ್ಯಾಸನ ಪಾತ್ರ ಸೃಷ್ಟಿ' ಎಂಬ ಮಹಾಪ್ರಬಂಧ ಬರೆದು ಪಿ.ಎಚ್.ಡಿ. ಪಡೆದಿದ್ದಾರೆ.

ಡಾ. ಸದಾನಂದ ನಾಯಕರು ನಮ್ಮ ಜಿಲ್ಲೆಯ ಹಿರಿಯ ಸಂಶೋಧಕರಲ್ಲಿ ಒಬ್ಬರು. ಸಾಹಿತ್ಯ ಸಂಶೋಧನೆ ಮತ್ತು ಸಮಾಲೋಚನೆ ಕನ್ನಡ ಸಾಹಿತ್ಯದಲ್ಲಿ 'ಜೈನಪುರಾಣಗಳು,' 'ವೈದಿಕ ಪುರಾಣಗಳು,' 'ಪ್ರಬಂಧ ಪರಿಮಳ' 'ಸಮಾಜ ಶಿಕ್ಷಣ ಪ್ರವೇಶ' ಇತ್ಯಾದಿ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಅವರ ಸಾಹಿತ್ಯ ಸಂಶೋಧನೆ ಮತ್ತು ಸಮಾಲೋಚನೆ ರಾಜ್ಯಸಾಹಿತ್ಯ ಅಕಾಡೆಮಿಯಿಂದ ಪುರಸ್ಕೃತವಾದ ಗ್ರಂಥವಾಗಿದೆ. ವಿದ್ವತ್ಪೂರ್ಣ ಬಿಡಿ ಲೇಖನಗಳನ್ನೂ ಪ್ರಕಟಿಸಿದ್ದಾರೆ.

ಜಿ. ಎಚ್. ನಾಯಕರು ಸಾಹಿತ್ಯ ವಿಮರ್ಶಕರು. ಸಂವೇದನೆ ಎಂಬ ಗ್ರಂಥವೊಂದನ್ನು ಇತರರೊಂದಿಗೆ ಸಂಪಾದಿಸಿ ಪ್ರಕಟಿಸಿದ್ದಾರೆ. ಇವರ ಸಮಕಾಲೀನಕ್ಕೆ ಮುನ್ನುಡಿ ಬರೆಯುತ್ತಾ ಗೋಪಾಲಕೃಷ್ಣ ಅಡಿಗರು ದಿವಂಗತ ತೀ. ನಂ. ಶ್ರೀಕಂಠಯ್ಯ, ಡಿ. ಎಲ್. ನರಸಿಂಹಾಚಾರ್ಯರಲ್ಲಿ ವ್ಯಕ್ತವಾಗುತ್ತಿದ್ದ ಪಾಂಡಿತ್ಯ ಪ್ರತಿಭೆಗಳ ಅಪೂರ್ವ ಸಂಯೋಗ ಈ ಲೇಖಕರಲ್ಲೂ ಕಂಡು ಬರುತ್ತಿರುವುದು ಕನ್ನಡದ ಭವಿಷ್ಯದ ಬಗ್ಗೆ ನಮಗೆ ಭರವಸೆ ಹುಟ್ಟಿಸುತ್ತದೆ ಎಂದಿದ್ದಾರೆ. ಇವರನ್ನು ಕೆಲವೇ ಕನ್ನಡ ಪ್ರಥಮ ಶ್ರೇಣಿಯ ವಿಮರ್ಶಕರ ಪಂಕ್ತಿಗೆ ಸೇರಿಸಬಹುದು.

ತಮ್ಮ ಅನನ್ಯವಾದ ಮುಕ್ತಿನಂತಹ ಕಥನ ಕವನಗಳಿಂದ ಕನ್ನಡ ಕಾವ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದ ಕ. ವಿ. ಸು. ರ. ಎಕ್ಕುಂಡಿಯವರು ಬರೆದ ಕವಿ ಕಾವ್ಯ ಪರಿಚಯ "ಪು. ತಿ. ನರಸಿಂಹಾಚಾರ್" ಕಿರುಹೊತ್ತಿಗೆ ಅತ್ಯುತ್ತಮ ರಸ ಗ್ರಹಣ, ರಸವತ್ತಾದ ಕಾವ್ಯಮಯ ಮೋಹಕ ಗದ್ಯ ಬರವಣಿಗೆಗೆ ಸಾಕ್ಷಿಯಾಗಿರುವದರ ಜೊತೆಗೆ ಸಾಹಿತ್ಯ ವಿಮರ್ಶೆಯ ಸಹೃದಯ ರಸ ಗ್ರಹಣವಾಗಿದೆ.

ಗಣೇಶ ಹೆಗಡೆ ಕಿಲಾರವರು 'ಮಾನವ ನೀತಿ' ಮಾನವನ ನಡತೆಗೆ ಸದಾಚಾರವೇ ಮೂಲಾಧಾರ, ಕೃತಿಗಳಲ್ಲಿ ಬದುಕನ್ನು ಬಂಗಾರಗೊಳಿಸಬೇಕೆಂಬ ಉದ್ದೇಶದ ತತ್ವವನ್ನು ಸರಳವಾಗಿ ನಿರೂಪಿಸಿದ್ದಾರೆ.

ವಿಘ್ನೇಶ್ವರ ಶರ್ಮರು ಭಾರತೀಯ ಸಾಹಿತ್ಯ ಮತ್ತು ಕಲೆಗಳು ಮಾತಿನ ಯುಗದ ಮಹಾಪ್ರಭಾವ ಎಂಬ ಮುಖ್ಯವಾದ ಲೇಖನ ಸಂಗ್ರಹಗಳನ್ನು ಪ್ರಕಟಿಸಿರುತ್ತಾರೆ.

ರಾ. ಭ. ಹಾಸಣಗಿಯವರ ಯಕ್ಷನಾಟಕಗಳು ಮತ್ತು ವೈದಿಕ ವಾಙ್ಮಯ ಪರಿಚಯ 'ವಾಲ್ಮೀಕಿಯ ರಾಮ' 'ವ್ಯಾಸರ ಕೃಷ್ಣ' ಅಭ್ಯಾಸ ಪೂರ್ಣ ಗ್ರಂಥಗಳಾಗಿವೆ. ಸಚ್ಚಿದಾನಂದ ಶಿರೋಡಕರರು ಕನ್ನಡ ಇಂಗ್ಲೀಷ ಎರಡೂ ಭಾಷೆಗಳಲ್ಲಿ ಗ್ರಂಥಗಳನ್ನು ರಚಿಸಿದ್ದಾರೆ. 'ಅರ್ಥಶಾಸ್ತ್ರ'. 'ಸಹಕಾರಿ ಪ್ರಜಾಪ್ರಭುತ್ವ' 'ಒಕ್ಕಲುತನದ ಹುಟ್ಟುವಳಿ' ಮಾರಾಟ ಮುಂತಾದ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

ಡಿ. ಎನ್. ರಾಯ್ಕರವರು ಅರ್ಥಶಾಸ್ತ್ರಕ್ಕೆ ಸಂಬಂಧಪಟ್ಟಂಥ ಲೇಖನಗಳನ್ನು ಕನ್ನಡ ಇಂಗ್ಲೀಷ ಎರಡೂ ಭಾಷೆಗಳಲ್ಲಿ ಬರೆದಿದ್ದಾರೆ. 'ರೂಪಾಯಿಯ ಅಪಮೌಲ್ಯ' ಕುರಿತ ಅವರ ಲೇಖನ ಪ್ರೌಢವಾಗಿದೆ.

ಡಾ. ಎನ್. ಆರ್. ರಾವ ಅವರು ಜಿಲ್ಲೆಯ ಜ್ಞಾನವಾಙ್ಮಯ ಸಂಪನ್ನರಲ್ಲಿ ಒಬ್ಬರು. ಕರ್ನಾಟಕ ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸ ಮಾಲೆಯಿಂದ ಪ್ರಕಟವಾದ ರಾಜಕೀಯ ಪಕ್ಷಗಳು, ಆರ್ಥಿಕ ರಾಜಕೀಯ ಮತ್ತು ಸಾಮಾಜಿಕ ವಿಷಯಗಳ ಕುರಿತು ಬರೆದ ಪ್ರಬಂಧ ಸಂಗ್ರಹಗಳೆಲ್ಲ ವಿಚಾರ ಸಾಹಿತ್ಯದ ಬೆಳವಣಿಗೆಗೆ ನಿದರ್ಶನಗಳಾಗಿವೆ.

ಪ್ರೊ. ಟಿ. ಎಂ. ಪಂಡೀತರ ಕೃಷಿ, ವಾಣಿಜ್ಯ, ಉದ್ದಿಮೆ, ಆರ್ಥಿಕಾಭಿವೃದ್ಧಿಗೆ ಹಾಗೂ ಬ್ಯಾಂಕಿಂಗ ಶಾಸ್ತ್ರಕ್ಕೆ ಸಂಬಂಧಪಟ್ಟು ಮತ್ತು ಪತ್ರಿಕೆಗಳಲ್ಲಿ ನೂರಾರು ವಿಮರ್ಶಾತ್ಮಕ ಲೇಖನಗಳು

ಹಾಗೂ ಪ್ರಸಾರಾಂಗದ ಮೂರು ಉಪನ್ಯಾಸ ಕಿರು ಹೊತ್ತಿಗೆಗಳು ಉತ್ತಮ ಕೃತಿಗಳಾಗಿವೆ.

ಜಿ. ಎಸ್. ಭಟ್ಟರ 'ಸಾಹಿತ್ಯ ಸಾಧಕರು' ಕನ್ನಡ ಸಾಹಿತ್ಯಕ್ಕೊಂದು ವಿಶಿಷ್ಟ ಕೊಡುಗೆ. ಇವರಲ್ಲದೇ ಅನೇಕ ವಿಮರ್ಶಕರು ಈ ಜಿಲ್ಲೆಯಲ್ಲಿದ್ದಾರೆ. ವಿ. ಜೆ. ನಾಯಕ, ಅಮ್ಮೆಂಬಳ ಆನಂದ, ಎಸ್. ಆರ್. ಪಾಟೀಲ, ವಿ. ಎ. ಜೋಶಿ, ಎಲ್. ವಿ. ಪೈ, ಎಲ್. ಟಿ. ಶರ್ಮಾ, ಡಾ॥ ದಯಾನಂದ ನರಸಿಂಹ ಶಾನಭಾಗ, ಡಾ. ಎನ್. ಆರ್. ನಾಯ್ಕ ಮುಂತಾದವರು ವೈಚಾರಿಕ ಸಾಹಿತ್ಯಕ್ಕೆ ಮಹತ್ವದ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಮಹಿಳೆಯರಾದ, ಸರೋಜಿನಿ ನಾಯಕ, ಕುಸುಮಾ ಕೇಣೀಕರ, ಸುಶೀಲಾ ನಾಯಕ, ಶಾಂತಾ ಕಾಯ್ಕಿಣಿ, ಜ್ಯೋತ್ಸ್ನಾ ಕಾಮತ, ಶಾಂತಿ ನಾಯಕ ತಮ್ಮ ಸೇವೆಯನ್ನು ವಿಚಾರ ಸಾಹಿತ್ಯಕ್ಕೆ ಸಲ್ಲಿಸಿದ್ದಾರೆ.

ಪತ್ರಿಕಾ ಸಾಹಿತ್ಯ

ಉತ್ತರ ಕನ್ನಡ ಜಿಲ್ಲೆಯ ಪತ್ರಿಕಾ ಪ್ರಪಂಚದ ಇತಿಹಾಸ ಸುದೀರ್ಘವಾದದ್ದು ಎನ್ನಬಹುದು. ಅದು ಸಾಕಷ್ಟು ಸತ್ವಶಾಲಿಯಾಗಿರದಿದ್ದರೂ ನಿರಾಶೆ ತರುವಷ್ಟು ಸಪ್ಪೆಯೂ ಅಲ್ಲ. ಹಲವು ಪತ್ರಿಕೆಗಳು ಹುಟ್ಟಿ ಕೆಲ ಕಾಲ ಬದುಕಿ ಬಾಲಗ್ರಹ ಪೀಡಿತವಾಗಿ ಕೊನೆಯ ಉಸಿರೆಳೆದ ಪತ್ರಿಕೆಗಳೇ ಹೆಚ್ಚು. ಈ ವ್ಯವಸಾಯದಲ್ಲಿ ನಿರತರಾದವರು ಕೈ ಸುಟ್ಟುಕೊಂಡ ಪ್ರಸಂಗಗಳೇ ಬಹಳ. ದೈನಂದಿನ ಪತ್ರಿಕೆ ಇಲ್ಲದಿದ್ದರೂ ಕೆಲವು ವಾರ ಪತ್ರಿಕೆಗಳು ಜಿಲ್ಲೆಯ ಸಮಸ್ಯೆ ನೀಗಿಸಲು ಸುದ್ದಿ ಪ್ರಸಾರಿಸಲು ಪ್ರಯತ್ನ

ಮಾಡಿವೆ. ಜನಸಾಮಾನ್ಯರನ್ನು ರಕ್ಷಿಸುವದು ಮತ್ತು ಪ್ರಜಾ ಪ್ರಭುತ್ವದಲ್ಲಿ ಅವರ ವಿಶ್ವಾಸ ದೃಢಪಡಿಸಿ ಅದನ್ನು ಯಶಸ್ವಿಗೊಳಿಸುವುದು ಪತ್ರಿಕಾ ಧರ್ಮವಾಗಿ ಪರಿಣಮಿಸಿದೆ.

ಕೆಲವು ಈ ಜಿಲ್ಲೆಯ ಪತ್ರಿಕೆಗಳು ೧) ಶಿರಸಿ ಸಮಾಚಾರ ೨) ಜನಸೇವಕ ೩) ಚುನಾವಣೆ ೪) ಜೀವೋತ್ತಮ ೫) ಕಾನಡಾ ವೃತ್ತ ೬) ಮುನ್ನಡೆ ೭) ಭೂದಾನ ೮) ನಾಗರಿಕ ೯) ಸಮಾಜ ವಾಣಿ ೧೦) ಸವಿಜೇನು ೧೧) ಸತ್ಯಸಾಯಿ ಸುಧಾ ೧೨) ಸಹಚಾರ ೧೩) ಆಚಾರ

ದೇಸೀ ಸಾಹಿತ್ಯ

ಜನಪದ ಸಾಹಿತ್ಯವು ಮಾನವರಲ್ಲಿ ಭಾಷೆಯು ವಿಕಾಸವಾದ ಅನಂತರ ತೀರ ಪ್ರಾಚೀನ ಕಾಲದಲ್ಲಿ ರಚಿತವಾಗಲು ಆರಂಭವಾಯಿತೆಂದು ಹೇಳಬಹುದು. ಅದರ ಪ್ರಾಚೀನತೆಯನ್ನು ಕುರಿತು ಪ್ರಮಾಣಗಳನ್ನು ಹೇಳಿ ಕಾಲವನ್ನು ಸೂಚಿಸುವುದು ಕಷ್ಟ.

ಉತ್ತರ ಕನ್ನಡ ಜಿಲ್ಲೆಯು ಜಾನಪದ ಸಾಹಿತ್ಯದ ಬಹುದೊಡ್ಡ ಗಣಿಯಾಗಿದೆ. ಈ ಗಣಿಯಿಂದ ಡಾ. ಎಲ್. ಆರ್. ಹೆಗಡೆ, ಡಾ. ಎನ್.ಆರ್. ನಾಯ್ಕ, ಜಿ.ಆರ್. ಹೆಗಡೆಯವರು ವೈವಿಧ್ಯಮಯವಾದ ಜನಪದವನ್ನು ಸಂಗ್ರಹ ಮಾಡಿ ಪ್ರಕಟಿಸಿದ್ದಾರೆ. ಜಾನಪದ ವಿಷಯವು ಬಹುದೊಡ್ಡ ಮಹಾಸಾಗರದಂತಿಹುದು "ಕೊಡದೊಳಗೆಷ್ಟು ನಿಲ್ಲುವದು ಸಮುದ್ರ ಜಲ".

ಅಕ್ಷರ ಕಲಿಯದಿದ್ದರೂ ಅನುಭವಸ್ಥರೂ ರಸಿಕರೂ ಬದುಕಿನ ಸಾರ ಸತ್ತ್ವವನ್ನು ಅರಿತವರೂ ಆದ ಜನರು ಬಾಳುತ್ತಿದ್ದ ಬಗೆಯನ್ನು ಈ ಗೀತೆಗಳು ಕನ್ನಡಿ ಹಿಡಿದು ತೋರಿಸುತ್ತವೆ. ಬಾಳಿನ ಪ್ರತಿ ಪೆಜ್ಜೆಯಲ್ಲೂ ದಿನದ ಒಂದೊಂದು ಕಾರ್ಯದಲ್ಲೂ ನಮ್ಮ ಜನ ಹೇಗೆ ಕ್ರಮವರಿತು ತಮ್ಮ ನಡೆ ನುಡಿಯನ್ನು ರೂಪಿಸಿ ಕೊಳ್ಳುತ್ತಿದ್ದರು ಎಂಬುದು ಜನಪದದಿಂದ ತಿಳಿಯ ಬಹುದು. ಕಥನ ಗೀತಗಳು ಅಂದಿನ ಸಾಮಾಜಿಕ ಪ್ರಜ್ಞೆಯ ಜೊತೆಗೆ ಬಾಳಿನ ಅರ್ಥದ ಬಗ್ಗೆ ತೀರ್ಮಾನವನ್ನೂ ಸೂಚಿಸುತ್ತವೆ. ಮದುವೆಯ ಹಾಡುಗಳು ಸಂಪ್ರದಾಯದ ನಂಬಿಕೆಯನ್ನು ತೋರಿಸುತ್ತವೆ. ಸಂಪ್ರದಾಯದ ಅಂಕುಡೊಂಕು ವ್ಯಂಗ್ಯವಾಗಿ ಹಾಸ್ಯವಾಗಿ ವಿಡಂಬನೆಯಿಂದ ಸೂಚ್ಯವಾಗಿ ತಿಳಿಸುತ್ತವೆ.

ಹಳ್ಳಿಯ ಹೆಣ್ಣು ಮಕ್ಕಳಿಂದ, ಒಕ್ಕಲಿಗ ಗಂಡಸರಿಂದ, ಮೀನುಗಾರರಿಂದ ಹುಟ್ಟಿದ ತ್ರಿಪದಿಗಳು, ಲಾವಣಿಗಳು ಕಥನ ಕವನಗಳು, ಜೋಗುಳ ಹಾಡುಗಳು, ಶಾಸ್ತ್ರದ ಹಾಡುಗಳು, ಗಾವೆಗಳು, ಗುಮ್ಮಟೆ ಪದಗಳು, ಹಗರಣದ, ಪದಗಳು, ಕೋಲಾಟದ ಪದಗಳು, ಸೋಭಾನದ ಹಾಡುಗಳು, ಒಗಟುಗಳು, ಜನಪದ ಕಥೆಗಳು, ಜಾನಪದ ವೈದ್ಯ, ಬಗೆ ಬಗೆಯ ಪ್ರಕಾರಗಳಿವೆ.

ಯಕ್ಷಗಾನ ಸಾಹಿತ್ಯ

ಆದರ್ಶ ಕಲೆಯೆನಿಸಿದ ಯಕ್ಷಗಾನವು ಉತ್ತರ ಕನ್ನಡದ ದೇಸೀ ಸಾಹಿತ್ಯದಲ್ಲಿ ಒಂದು. ಯಕ್ಷಗಾನ ಕಲೆಗೆ ಈ ಜಿಲ್ಲೆಯೇ

ತವರೂರು. ಯಕ್ಷಗಾನ ಕಲೆಯನ್ನು ಜೀವಂತವಾಗಿ ಉಳಿಸಿಕೊಂಡು ಬಂದ ಶ್ರೇಯಸ್ಸು ಉತ್ತರ ಕನ್ನಡ ಜಿಲ್ಲೆಗೂ ಸಲ್ಲುತ್ತದೆ. ಇಂದಿನ ಆಧುನಿಕ ಸಿನೇಮಾ, ನಾಟಕ, ಸಂಗೀತ ಕಛೇರಿಗಳ ಮಧ್ಯದಲ್ಲಿಯೂ ಯಕ್ಷಗಾನ ಕಲೆ ಚೆನ್ನಾಗಿ ಬದುಕಿ ಉಳಿದಿದೆ. ಈ ಕಲೆಯ ಚೆಲುವು-ನಿಲುವು ದೇಶ ವಿದೇಶಿಯರನ್ನೂ ಸಹ ಆಕರ್ಷಿಸಿದೆ. ಆಡಂಬರವಾದ ಬಣ್ಣ ಭೂಷಣ ಸ್ವಚ್ಛಂದ ನೃತ್ಯಗತಿ, ಲಯ ವಿನ್ಯಾಸ, ಹಾಡುಗಾರಿಕೆ, ಆಶು ಸಂಭಾಷಣೆ ಇವುಗಳಿಂದ ಜೀವಂತವಾಗಿ ಉಳಿದು ಬಂದಿದೆ. ಯಕ್ಷಗಾನವು ನಮ್ಮ ಜಿಲ್ಲೆಯ ಹೆಮ್ಮೆಯ ಕಲೆ. ದಕ್ಷಿಣೋತ್ತರ ಕನ್ನಡ ಜಿಲ್ಲೆಯ ಕೇಂದ್ರವೆನಿಸಿದ ಹೊನ್ನಾವರದ ಹಳದೀಪುರ ಕರ್ಕಿ ಭಾಗದಲ್ಲಿ ಹಾಸ್ಯಗಾರ ಮನೆತನ ಭಾಗವತ ಮನೆತನ ಎಂಬವು ಯಕ್ಷಗಾನ ಪರಂಪರೆಯನ್ನು ಬೆಳೆಸಿಕೊಂಡು ಬಂದ ಹಳೆಯ ಮನೆತನಗಳಾಗಿವೆ ಅನೇಕ ಯಕ್ಷಗಾನ ಪ್ರಸಂಗಗಳು ಈ ಜಿಲ್ಲೆಯಲ್ಲಿ ಹಿಂದಿನಿಂದಲೂ ರಚಿತವಾಗಿ ಇಂದಿಗೂ ಮುಂದುವರಿಯುತ್ತಾ ಹೋಗಿದೆ. ಇವರೆಲ್ಲ ರಾಮಾಯಣ, ಭಾರತ, ಭಾಗವತ, ಮೊದಲಾದ ಪುರಾಣಗಳ ಹಾಗೂ ಐತಿಹಾಸಿಕ ವಿಷಯಗಳನ್ನು ಆಯ್ದುಕೊಂಡು ಕೃತಿ ರಚಿಸಿದ್ದಾರೆ, ಪ್ರಯೋಗಗಳನ್ನು ಮಾಡುತ್ತಾ ಬಂದಿದ್ದಾರೆ.

ಕ್ರಿ. ಶ. ೧೫೦೦ ಕ್ಕಿಂತ ಮುಂಚಿತವಾಗಿ ಬರೆದಿರಬಹುದಾದ ಯಕ್ಷಗಾನ ಪ್ರಸಂಗ ಸಾಹಿತ್ಯ ನಮಗೆ ದೊರಕಿಲ್ಲ. ಉತ್ತರ ಕನ್ನಡದ ಅತಿ ಪ್ರಾಚೀನ ಕವಿ ಹೊನ್ನಾವರ ತಾಲೂಕಿನ ಬೈಲೂರಿನ ಬ್ರಾಹ್ಮಣ ಕವಿ. ಇವನು ಕೃಷ್ಣಾರ್ಜುನ ಕಾಳಗವೆಂಬ ಯಕ್ಷಗಾನ ಗ್ರಂಥವನ್ನು ಬರೆದಿದ್ದಾನೆ. ೧೬೮೫ರಲ್ಲಿ ಮುಗಿಸಿ

ತನ್ನ ಗುರುವಾದ ಚಿದಾನಂದನ ಪಾದಕ್ಕೆ ಅರ್ಪಿಸಿದ್ದೇನೆ. ಎಂದು ಹೇಳಿದ್ದಾನೆ.

ಸಾರಸ್ವತ ಬ್ರಾಹ್ಮಣನಾಗಿರುವ ಗೆರಸೊಪ್ಪೆಯ ಸಾಂತಯ್ಯನು ಏಕಾದಶೀ ಪ್ರಸಂಗ, ಕರ್ಣಪರ್ವ, ಜರಾಸಂಧ ಕಾಳಗ, ದ್ರೋಣ ಪರ್ವ, ಭೀಷ್ಮ ಪರ್ವ, ರಾವಣ ದಿಗ್ವಿಜಯ, ಸೀತಾ ಕಲ್ಯಾಣ, ಸುಭದ್ರಾ ಕಲ್ಯಾಣ, ಸುರಥ ಸುದನ್ವರ ಕಾಳಗಗಳೆಂಬ ಯಕ್ಷಗಾನ ಪ್ರಸಂಗಗಳನ್ನು ಬರೆದಿದ್ದಾನೆ

ಹೊನ್ನಾವರ ತಾಲೂಕಿನ ಶರಾವತಿ ನದಿಯ ದಂಡೆಯ ಮೇಲೆ ಇರುವ ನಗರೆಯ ಸುಬ್ರಹ್ಮಣ್ಯನು ಕ್ರಿ. ಶ. ಸುಮಾರು ೧೮೪೦ರಲ್ಲಿ ಶಂಭಾಸುರನ ಕಾಳಗ, ರಾವಣೋದ್ಭವ, ಯಕ್ಷಗಾನ ಪ್ರಸಂಗಗಳನ್ನು ಬರೆದಿದ್ದಾನೆ.

ಎಣ್ಣೆಮಡಿ ವೆಂಕಟರಮಣಯ್ಯ ಸಾರಸ್ವತ ಬ್ರಾಹ್ಮಣನು. ಇವನು ಭೀಷ್ಮಪರ್ವ ಹಾಗೂ ರುಕ್ಮಿಣೀ ಸ್ವಯಂವರವೆಂಬ ಯಕ್ಷಗಾನವನ್ನು ಬರೆದಿದ್ದಾನೆ. ಗೆರಸೊಪ್ಪೆ ಸಾಂತಯ್ಯನ ಮಗನಾದ ವೆಂಕಟರಮಣಯ್ಯನು ಯಕ್ಷಗಾನ ಪ್ರಸಂಗ ಬರೆದಿದ್ದಾನೆ.

ಹಲಸಿನ ಹಳ್ಳಿ ನರಸಿಂಹ ಶಾಸ್ತ್ರಿಗಳು "ರುಕ್ಮಾಂಗದ–ಯೆಂಬ ಯಕ್ಷಗಾನ ಪ್ರಸಂಗವನ್ನು ಸ್ಕಂದ ಪುರಾಣದೊಳಗಿಂದ ಆಯ್ದುಕೊಂಡಿದ್ದಾರೆ. ಇದು ಭಕ್ತಿರಸ ಪ್ರಧಾನವಾದುದು. ಇದರಲ್ಲಿ ಏಕಾದಶಿ ವ್ರತದ ವಿಷಯ ಬರುತ್ತದೆ.

ವಿಷ್ಣು ಸಭಾಹಿತರು ಹೊನ್ನಾವರ ತಾಲೂಕಿನ ಅಗ್ರಹಾರದವರು. ಇವರು ಬರೆದ ಹಲವಾರು ಯಕ್ಷಗಾನ ಪ್ರಸಂಗಗಳು ಕಳೆದು ಹೋಗಿವೆ. ಕೆಲವು ಲಭ್ಯವಾಗಿವೆ. ರಾಮ ಪಾದುಕಾ ಪಟ್ಟಾಭಿಷೇಕ, ಕೃಷ್ಣಸಂಧಾನ. ಕರ್ಣಪರ್ವ, ಶತಾಸ್ಯ ರಾವಣ ಕಾಳಗ, ಚಂದ್ರಹಾಸ ಮುಂ. ಇವರ ಯಕ್ಷಗಾನಗಳನ್ನೆಲ್ಲ ಮೊಟ್ಟ ಮೊದಲು ಅಭಿನಯಿಸಿದವರು ಹೆಚ್ಚಾಗಿ ಕರ್ಕಿ ಮತ್ತು ಅಗ್ರಹಾರ ಪರಿಸರದ ಯಕ್ಷಗಾನ ಮಂಡಳಿಯವರು. ಇವರು ರಚಿಸಿದ ಯಕ್ಷಗಾನ ಕೃತಿಗಳೆಲ್ಲ "ಸಭಾಹಿತ ಪ್ರತಿ ಎಂದೇ ಪ್ರಸಿದ್ಧವಾಗಿವೆ.

ಆತ್ಮಾರಾಮರು ಸಿರ್ಸಿ ತಾಲೂಕಿನ ಅಮ್ಮನಹಳ್ಳಿ ಗ್ರಾಮದವರು. "ರುಕ್ಮಾಂಗದ ಚರಿತ್ರೆ" "ಸತೀಶಕ್ತಿ" "ಸಟೀಕಾ ವಿವೇಕ ವಿಜಯ" ಇವು ಇವರ ಯಕ್ಷಗಾನ ಕೃತಿಗಳು.

ಕಾಮೇಶ್ವರ ನಾರಾಯಣ ಇವರು ಗೋಕರ್ಣ ಸಮೀಪದ ಹಳ್ಳಿಯಾದ ಮಾಸ್ಕೇರಿ ಗ್ರಾಮದವರು. ಶಾಲಾ ಶಿಕ್ಷಕರಾಗಿದ್ದ ಇವರು ಯಕ್ಷಗಾನದಲ್ಲಿ ಪಾತ್ರಗಳನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸುತ್ತಿದ್ದರು. ಇವರಿಗೆ ಯಕ್ಷಗಾನದ ಗೀಳು ಬಹಳ. ಭಕ್ತ ವಿಜಯ ಇವರ ಯಕ್ಷಗಾನ ಕೃತಿಗಳಲ್ಲೊಂದು. ಮಾಸ್ಕೇರಿಯರೇ ಆದ ತಿಮ್ಮಣ್ಣ ನಾಯಕರು 'ಪದ್ಮಾವತಿ ಕಲ್ಯಾಣ' 'ಕಚದೇವಯಾನಿ' ಮತ್ತು ಗುರುದಕ್ಷಿಣೆಯೆಂಬ ಪ್ರಸಂಗಗಳನ್ನು ಬರೆದಿದ್ದಾರೆ.

ಕೇಶವ ರಾಮಕೃಷ್ಣ ಹೆಗಡೆಯವರು ಸಿರ್ಸಿ ತಾಲೂಕಿನ ಕೆಳಗಿನ ಓಣಿ ಕೇರಿಯವರು. ಶುಂಭ ನಿಶುಂಭ ವಧೆ ಎಂಬ ಯಕ್ಷಗಾನ ಕೃತಿಯನ್ನು ರಚಿಸಿದ್ದಾರೆ.

ತಿಮ್ಮಪ್ಪ ವೆಂಕಪ್ಪ ಹೆಗಡೆಯವರು ಸಿದ್ದಾಪುರ ತಾಲೂಕಿನ ಕರ್ಕಿ ಸವಲು ಗ್ರಾಮದ ಜಾನಕೈ ಎಂಬ ಊರಿನವರು. ಜನನ ೧೮೯೮ ಹಲವಾರು ಯಕ್ಷಗಾನ ಕೃತಿಗಳನ್ನು ರಚಿಸಿದ್ದಾರೆ. ಮದನ ಸುಂದರಿ ಸ್ವಯಂವರ, ಮಾರುತಿ ಪ್ರತಾಪ, ಸಂಪೂರ್ಣ ರಾಮಾಯಣ, ಅನಸೂಯಾ ಚರಿತ್ರ, ಶನಿ ಕಥೆ, ಸತ್ಯಹರಿಶ್ಚಂದ್ರ, ಯೌವನಾಶ್ವ ಅನುಸಾಲ್ವ ಕಾಳಗ. ಸತ್ಯವೃತ–ಚಿತ್ರಕೇತು ಕಾಳಗ. ಮೂರೂರ ದೇವರು ಹೆಗಡೆಯವರು ಕೆಲವು ಯಕ್ಷಗಾನ ಕೃತಿಗಳನ್ನು ಬರೆದಿದ್ದಾರೆ.

ಸುಬ್ರಾಯ ವೆಂಕಪ್ಪ ಹೆಗಡೆ ಗಂಗಾಜಿಯವರು. "ಗರುಡ ವಿಜಯ" ಎಂಬ ಚಿಕ್ಕ ಯಕ್ಷಗಾನ ಪ್ರಸಂಗ ಬರೆದಿದ್ದಾರೆ. ೧೯೬೧ನೇ ಇಸವಿಯಲ್ಲಿ ಮಾರಿಕಾಂಬಾ ಸಾಹಿತ್ಯ ಪ್ರಸಾರದ ಯಕ್ಷಗಾನ ಸಾಹಿತ್ಯ ವಿಭಾಗದಲ್ಲಿ ಪುರಸ್ಕಾರ ಪಡೆದಿದೆ. ಮಂಜ ಭಾಗವತರು ಹೊನ್ನಾವರ ತಾಲೂಕಿನ ಕಡತೋಕಾ ಗ್ರಾಮದವರು. ಯಕ್ಷಗಾನ ಭಾಗವತಿಕೆಯಲ್ಲಂತೂ ಇವರದು ಎತ್ತಿದ ಕೈ. ಧರ್ಮಸ್ಥಳ ಮೇಳದ ಭಾಗವತರಾಗಿ ಸೇವೆಸಲ್ಲಿಸಿದಲ್ಲದೇ, ಭೋಜ ಕಾಳಿದಾಸ, ವಿಕ್ರಮೋರ್ವಶಿಯ, ವಸಂತಸೇನಾ, ಎಂಬ ಯಕ್ಷಗಾನ ಕೃತಿಗಳನ್ನು ರಚಿಸಿದ್ದಾರೆ.

ಗಜಾನನ ಗಣಪ ಹೆಗಡೆ ವರ್ದಸರವರು ಆಧುನಿಕ ಕಾಲದ ವಸ್ತುವನ್ನು ಇಟ್ಟುಕೊಂಡು "ಭಾರತ ವಿಜಯ"ವೆಂಬ ಯಕ್ಷಗಾನ ಕೃತಿಯನ್ನು ರಚಿಸಿದ್ದಾರೆ, ಬಾಳೆಗದ್ದೆ ಶಿವರಾಮ ಹೆಗಡೆಯವರು "ಅಶ್ವಮೇಧ ಪರ್ವ" ಎಂಬ ಯಕ್ಷಗಾನ ಪ್ರಸಂಗ ಬರೆದಿದ್ದಾರೆ.

ಜಿ. ಆರ್. ಪಾಂಡೇಶ್ವರರ 'ಮಾರಾವತಾರ' ಯಕ್ಷಗಾನದಲ್ಲಿ ಒಂದು ಹೊಸ ಪ್ರಯೋಗವಾಗಿದೆ. ಮಾಳಕೋಡ ಶಂಭು ಗಣಪತಿ ಭಟ್ಟ ಅವರ 'ಚಂದ್ರಹಾಸ ಚರಿತ್ರೆ' ಹಾಗೂ ಮಾಳ್ಕೋಡನವರೇ ಆದ ನಾರಾಯಣರವರ ನವ ಕೈಲಾಸ ಯಕ್ಷಗಾನ ಪ್ರಸಂಗಗಳಾಗಿವೆ.

ಉಪಸಂಹಾರ

ಹೀಗೆ ಉತ್ತರ ಕನ್ನಡ ಜಿಲ್ಲೆಯ ಸಾಹಿತ್ಯವು ವೈವಿಧ್ಯಮಯವಾಗಿ ಹಲವು ಮುಖಗಳಿಂದ ಬೆಳೆಯುತ್ತಿದೆ. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿ ಮಾಡಿದವರು ಮಾಡುತ್ತಿರುವವರು ಉತ್ತರ ಕನ್ನತ ಜಿಲ್ಲೆಯಲ್ಲಿ ಸಾಕಷ್ಟು ಜನರಿದ್ದಾರೆ. ನವ್ಯ ಸಾಹಿತ್ಯದ ಕಡೆಗೆ ಒಲವು ಹೆಚ್ಚಾಗುತ್ತಿದೆ. ಒಟ್ಟಿನಲ್ಲಿ ಹೇಳುವದಾದರೆ ಕನ್ನಡ ಕಾವ್ಯದ ರಸಗಂಗೆಯೊಂದಿಗೆ ಉತ್ತರ ಕನ್ನಡದ ಕಾವ್ಯವಾಹಿನಿಯೂ ಸೇರಿ ಹರಿವಿದೆ. ಕನ್ನಡದ ಕಾವ್ಯ ಪ್ರಪಂಚಕ್ಕೆ. ಸಾಹಿತ್ಯ ಕ್ಷೇತ್ರಕ್ಕೆ ಉತ್ತರ ಕನ್ನಡ ಜಿಲ್ಲೆಯ ಸ್ಥಾನ ಬಹು ಎತ್ತರಕ್ಕೆ ಬರಲಾರದೆಂಬ ಭಾವನೆ ಕೆಲವರಲ್ಲಿದೆ. ಉತ್ತರ ಕನ್ನಡ ಜಿಲ್ಲೆಯ ಸಂಪೂರ್ಣ ಸಾಹಿತ್ಯ ಅವಲೋಕಿಸಿ ನೋಡಿದಾಗ ಕನ್ನಡ ಸಾಹಿತ್ಯಕ್ಕೆ ತನ್ನದೇ ಆದ ಬಹುದೊಡ್ಡ ಕೊಡುಗೆ ಈ ಜಿಲ್ಲೆ ನೀಡಿದೆ.

ಈ ಲೇಖನದಲ್ಲಿ ಬೇರೆ ಜಿಲ್ಲೆಯವರಾಗಿದ್ದು ನಮ್ಮ ಜಿಲ್ಲೆಗೆ ಬಂದು ನೆಲಸಿ ತಮ್ಮ ಸಾಹಿತ್ಯ ಸೇವೆಗಳಿಂದ ಈ ಜಿಲ್ಲೆಯನ್ನು ಬೆಳಕಿಗೆ ತಂದವರ ಹೆಸರುಗಳನ್ನು ಸೇರಿಸಿಕೊಳ್ಳಲಾಗಿದೆಯಲ್ಲದೆ ಈ ಜಿಲ್ಲೆಯವರಾಗಿದ್ದು ಬೇರೆ ಜಿಲ್ಲೆಗಳಿಗೆ

ಹೋಗಿ ಸಾಹಿತ್ಯ ಸೇವೆ ಸಲ್ಲಿಸಿದವರ ಹೆಸರನ್ನೂ ಸೇರಿಸಿಕೊಳ್ಳಲಾಗಿದೆ.

ಕೆಲವು ಲೇಖಕರ ಹಾಗೂ ಕೃತಿಯ ಹೆಸರನ್ನು ಮಾತ್ರ ಕೊಡಲಾಗಿದೆ. ಪುಟಗಳ ಚೌಕಟ್ಟಿನಲ್ಲಿ ಎಲ್ಲ ವಿಷಯ ಅಳವಡಿಸಬೇಕಾಗಿರುವದರಿಂದ ವಿಷಯದ ವಿಸ್ತಾರಕ್ಕೆ ಅವಕಾಶವಿರಲಿಲ್ಲ. ಹರಟೆ ನಗೆ ಬರಹ ಬರೆದವರು ಈ ಜಿಲ್ಲೆಯಲ್ಲಿದ್ದರೂ ಪುಟಗಳ ಮಿತಿಯೊಳಗೆ ಬರಬೇಕಾದ್ದರಿಂದ ಆ ವಿಷಯವನ್ನು ಬಿಡಲಾಗಿದೆ. ಆದರೆ ಕೆಲವೇ ಜನರು ಮಾತ್ರ ಹರಟೆ ಬರೆದಿದ್ದಾರೆ.

"ಸಾಹಿತ್ಯ ಕ್ಷೇತ್ರಕ್ಕೆ ಉತ್ತರ ಕನ್ನಡ ಜಿಲ್ಲೆಯ ಕೊಡುಗೆ" ಈ ವಿಷಯದ ಮೇಲೆ ಲೇಖನ ಬರೆಯುವದು ನಿಜವಾಗಿಯೂ ಸಾಹಸದ ವಿಷಯವೇ ಆಯಿತು. ಅನೇಕ ಲೇಖನಗಳ ಆಧಾರದ ಮೇಲೆ ಈ ಲೇಖನವನ್ನು ಬರೆದಿದ್ದೇನೆ. ಆದರೆ ಬರೆಯುತ್ತಾ ಹೋದಂತೆ ವಿಸ್ತಾರವಾಗುತ್ತಿರುವ ಲೇಖನವನ್ನು ಸಂಕ್ಷೇಪವಾಗಿ ಬರೆಯಲು ಪ್ರಯತ್ನಿಸಿದ್ದೇನೆ. ಈ ರೀತಿ ಮಾಡಿರುವದರಿಂದ ಕೆಲವು ಸಾಹಿತಿಗಳಿಗೆ ಅನ್ಯಾಯವಾಗಿರಲೂ ಬಹುದು. ಕೆಲವು ಸಾಹಿತಿಗಳ ಕವಿಗಳ ಹೆಸರು ಈ ಲೇಖನದಲ್ಲಿ ತಪ್ಪಿ ಬರದೇ ಹೋಗಿರಬಹುದು ಆದಕ್ಕಾಗಿ ತಪ್ಪು ತಿಳಿದುಕೊಳ್ಳಬಾರದೆಂದು ನಿವೇದಿಸಿಕೊಳ್ಳುತ್ತೇನೆ.

ಗ್ರಂಥ ಋಣ

೧. ಉತ್ತರ ಕನ್ನಡ ಜಿಲ್ಲೆಯ ಗ್ರಂಥಕಾರರು
ಸಂಪಾದಕರು : ಶ್ರೀ ಎನ್. ಕೆ. ಹೆಗಡೆ ಮತ್ತು
ಆರ್. ಎಸ್. ಭಟ್ಟ

೨. ಆಂಡಯ್ಯ—ಡಾ. ಬಿ. ಎಸ್. ಕುಲಕರ್ಣಿ

೩. ಕನ್ನಡ ಭಾಗವತ (ನಿತ್ಯಾತ್ಮ ಶುಕಯೋಗಿ) ಪ್ರಥಮ,
ದ್ವಿತೀಯ ಸಂಪುಟ—ಕೆ. ವೆಂಕಟರಾಮಪ್ಪ

೪. ಪೌಲೋಮ—ಆಸ್ತಿಕ ಪರ್ವಗಳು (ಸದಾನಂದ ಕವಿ)
— ಡಾ। ಆರ್. ಸಿ. ಹಿರೇಮಠ, ಡಾ। ಕೆ. ಜಿ. ಶಾಸ್ತ್ರಿ

೫. ವನಶ್ರೀ (ಉತ್ತರ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನ)
ಸ್ಮರಣಸಂಚಿಕೆ ೧೯೭೪

೬. ಶರಾವತಿ (ಉತ್ತರ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನ)
ಸ್ಮರಣಸಂಚಿಕೆ ೧೯೭೨

೭. ಕದಂಬ ಅಖಿಲ ಭಾರತ ೫೫ನೆಯ ಕನ್ನಡ ಸಾಹಿತ್ಯ
ಸಮ್ಮೇಳನ ಸ್ಮರಣ ಸಂಚಿಕೆ ೧೯೮೩

೮. ತಾಂಬೂಲ(ಉತ್ತರ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನ)
ಸ್ಮರಣ ಸಂಚಿಕೆ ೧೯೮೧

೯. ಹಸಿರು ವಿಶೇಷಾಂಕ ನವಂಬರ, ೧೯೭೮

೧೦. ವೈಜಯಂತಿ(ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘದ
ಸಂಪುಟ) ೧೯೭೫

೧೧. ಕಾನಡಾ ವೃತ್ತ ವಜ್ರಮಹೋತ್ಸವದ ಸಂಪುಟ) ೧೯೮೨

೧೨. ಶೃಂಗಾರ ನವಂಬರ, ೧೯೭೪

೧೩. ದೇವಿ ಮಹಾತ್ಮೆ ಸಂಪಾದಕರು: ಎನ್. ಕೆ. ಹೆಗಡೆ

೧೪. ಶ್ರೀಶೈಲ ಮಹಾತ್ಮೆ ಸಂಪಾದಕರು: ಎನ್. ಕೆ ಹೆಗಡೆ

ಉಪನ್ಯಾಸ ಗ್ರಂಥಮಾಲೆಯ
ಕೆಲವು ಪ್ರಕಟನೆಗಳು

---

೧. ಜನಪದ ಸಾಹಿತ್ಯದಲ್ಲಿ ಮಾತೃವಾತ್ಸಲ್ಯ

—ಲೀಲಾವತಿ ಬಿ. ತೋರಣಗಟ್ಟಿ

೨. ಜನಪದದಲ್ಲಿ ಮಕ್ಕಳ ಸಾಹಿತ್ಯ

—ಸಂಗಮೇಶ ಎಂ. ಬಿರಾದಾರ

೩. ಕನ್ನಡ ಕಾವ್ಯಗಳಲ್ಲಿ ನಾಟಕೀಯತೆ

—ಎಸ್. ಬಿ. ತೋಟದ

೪. ಕನ್ನಡದಲ್ಲಿ ಪ್ರವಾಸ ಸಾಹಿತ್ಯ

—ಜಿ. ಎಸ್. ವಡಗಾಂವಿ

೫. ಇಂಗ್ಲೀಷ ಸಾಹಿತ್ಯದಲ್ಲಿ ಹಾಸ್ಯ

—ವ್ಹಿ. ಕೆ. ನವಲಗುಂದ

೬. ಶರಣ ಸಾಹಿತ್ಯ

—ಬಿ. ಎಸ್. ಗೊರವರ

೭. ರಂಗಭೂಮಿಯ ನಟಸಾರ್ವಭೌಮ
ಸಿದ್ರಾಮಪ್ಪ ಹಂದಿಗನೂರ

—ಬಿ. ಆರ್. ನಾಡಗೌಡ

೮. ತ್ರಿವೇಣಿಯವರ ಕಾದಂಬರಿಗಳು

—ವಿಜಯಶ್ರೀ ಸಬರದ

೯. ದಾಸಸಾಹಿತ್ಯ ಹಾಗೂ ಸಾಮಾಜಿಕ ಮೌಲ್ಯಗಳು

—ಇಲ್ಲೂರು ಜಯರಾಮಪ್ಪ

೧೦. ಜನಪದ ಸಾಹಿತ್ಯದಲ್ಲಿ ಹಾಸ್ಯ

—ಮೃತ್ಯುಂಜಯ ಹೊರಕೇರಿ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ